# ನಾದ ನೂಪುರ ವಂಡಾರು

# Nadanoopura Vandaru



ಮುಖ್ಯಸ್ಥರು – ವಂಡಾರು ಗೋವಿಂದ
97418 47278
ಪ್ರಧಾನ ಸಂಪಾದಕರು – ಶುಭಾಶಯ
ಗೌರವ ಸಂಪಾದಕರು – ಅಜಿತ್ ಕಾರಂತ್
94496 86807

Nadanoopura Yakshothana Trust (NYT) (R.)
Vandaru
Marvi, Vandaru village and Post, Brahmavara Taluk, Udupi District – 576223

**ನಾಡಿನ ಸಮಸ್ತ ಜನತೆಗೆ ಅಕ್ಷಯ ತೃತೀಯದ ಶುಭಾಶಯಗಳು**

ಪರಿವಿಡಿ

ಬೋರ್ಡ್ ರೂಮ್
ಸಂಪಾದಕೀಯ
ಡಿಜಿಟಲೀಕರಣದಿಂದ ಯಕ್ಷಗಾನಕ್ಕೆ ಹಾನಿ??
ಡಿಜಿಟಲ್ ಮಾಧ್ಯಮ – ಅವಲೋಕನ
ಕಲಾವಿದರಿಗೆ ತುರ್ತು ನಿಧಿ– ಒಂದು ಚಿಂತನೆ
ಮುಂಬೈನಲ್ಲಿ ಯಕ್ಷಗಾನದ ಕವಲು
ಅನನ್ಯ ಪಾತ್ರ ಪರಂಪರೆಯ ಮಲ್ಲ – ಜಲವಳ್ಳಿ
ಯಕ್ಷ ಸಾಧಕಿ – ನರ್ಮದಾ ಶಿಬರೂರಾಯ
ರಸಸ್ಫುರಣೆ
ಮೆಲುಕು
ಕಾಡುವ ಪಾತ್ರ – 1. ಕುಮುಟಾ ಗಣಪತಿ ನಾಯಕ್ 2. ಮುಖ್ಯಪ್ರಾಣ ಕಿನ್ನಿಗೋಳಿ
ರಂಗ ಮಾರ್ಗದರ್ಶಿ
ಸಂಪನ್ಮೂಲ ಕೇಂದ್ರ – ಕಾಫಿ ನಾಡಲ್ಲೊಂದು ಯಕ್ಷ ಸಂಸ್ಥೆ
ಚಾರಿಟಿ ರೂಮ್

## ಬೋರ್ಡ್ ರೂಮ್



ವಂಡಾರು ಗೋವಿಂದ

ಸ್ನೇಹಿತರೆ ನಮಸ್ಕಾರ,

ನಾಡಿನ ಸಮಸ್ತ ಜನತೆಯ ಸುಕೃತ ಅಕ್ಷಯವಾಗಲೆಂದು ಬಯಸುತ್ತಾ ಸರ್ವರಿಗೂ ಅಕ್ಷಯ ತೃತೀಯದ ಶುಭಾಶಯಗಳು. ನಾದನೂಪುರದ ಒಂದೆರಡು ಚಟುವಟಿಕೆಗಳ ಬಗ್ಗೆ ಈ ಸಂಚಿಕೆಯಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳಬಯಸುವೆ. ನಾದ ನೂಪುರ ಯಕ್ಷೋತ್ಥಾನ ಟ್ರಸ್ಟ್ ವತಿಯಿಂದ ಚಂದ್ರಾವಳಿ ವಿಲಾಸ ಎಂಬ ಕಿರು ಯಕ್ಷಗಾನ ಪ್ರಸಂಗವನ್ನು ದಿನಾಂಕ 19–03–2022ರಂದು ಶಿರಸಿಯ ಶ್ರೀ ಲಕ್ಷ್ಮಿ ವೆಂಕಟರಮಣ ದೇವಸ್ಥಾನ ಸಹಯೋಗದಲ್ಲಿ ಶಿರಸಿ ತಾಲೂಕಿನ ಹರಿಶಿಯಲ್ಲಿ ಪ್ರದರ್ಶಿಸಿದೆವು. ಹಿಮ್ಮೇಳದಲ್ಲಿ ಭಾಗವತರಾಗಿ ಆನಂದ ಅಂಕೋಲ, ಮದ್ದಳೆ ನಾಗರಾಜ ಭಂಡಾರಿ ಹಾಗೂ ಚೆಂಡೆವಾದಕರಾಗಿ ರಾಮನ್ ಹೊನ್ನಾವರ ಭಾಗವಹಿಸಿದ್ದರು. ಸಹಕಲಾವಿದರಾಗಿ ಅಶೋಕ್ ಭಟ್ ಸಿದ್ಧಾಪುರ, ಪ್ರಸನ್ನ ಶೆಟ್ಟಿಗಾರ್, ಮಾರುತಿ ಬೈಲಗದ್ದೆ, ಕಾಸರಕೋಡ್ ಶ್ರಿಧರ್ ಭಟ್ ಮತ್ತು ನಾನು ಪ್ರದರ್ಶನದಲ್ಲಿ ಕಾಣಿಸಿಕೊಂಡಿದ್ದೆವು. ಚಂದ್ರಾವಳಿ– ಕಿರು ಪ್ರಸಂಗವಾದರೂ ಅನೇಕ ವಿಷಯಗಳಿಂದಾಗಿ ಮಹತ್ವವನ್ನು ಪಡೆದಿರುವಂತಹಾ ಪ್ರಸಂಗ. ಇದು ಧ್ವಜಪುರದ ನಾಗಪ್ಪಯ್ಯ ವಿರಚಿತ ಪ್ರಸಂಗವಾಗಿದ್ದು ಈವರೆಗೆ ವಿವಿಧ ಮೇಳಗಳಲ್ಲಿ ವಿವಿಧ ಕಲಾವಿದರಿಂದ ಲೆಕ್ಕವಿಲ್ಲದಷ್ಟು ಪ್ರದರ್ಶನಗಳನ್ನು ಕಂಡಿದೆ. ಆದರೂ ಈ ಪ್ರಸಂಗದ ಆಕರ್ಷಣೆ ಜನರಿಗೆ ಕಡಿಮೆ ಆಗುವುದಿಲ್ಲ ಎನ್ನುವುದಕ್ಕೆ ಈಗಲೂ ಮುಂದೆಯೂ ಈ ಪ್ರಸಂಗಕ್ಕಿರುವ ಬೇಡಿಕೆಯೇ ಸಾಕ್ಷಿ. ವರ್ಷಕ್ಕೆ 35ರಿಂದ 40ರಷ್ಟು ಬಾರಿ ಈ ಪಾತ್ರ ನಿರ್ವಹಿಸುವ ಅವಕಾಶ ನನಗೆ ಸಿಗುತ್ತದೆ. ಒಂದೇ ದಿನದಲ್ಲಿ 2–3 ಬಾರಿಯೂ ಅದೇ ಪ್ರಸಂಗ, ಅದೇ ಪಾತ್ರವನ್ನು ಅಭಿನಯಿಸಿದ್ದು ಇದೆ. ಈ ಪ್ರಸಂಗದಲ್ಲಿ ಜನರಿಗೆ ಇಷ್ಟವಾಗುವಂತಹಾ ಅಂಶಗಳನ್ನು ಹೇಳುವುದಾದರೆ, ಕಾಲಮಿತಿಗೆ ಸೂಕ್ತವಾದ ಹಾಗೂ ಎಲ್ಲ ರಸಗಳೂ ಮಿಳಿತವಾಗಿರುವಂತಹಾ ಪ್ರಸಂಗ ಇದಾಗಿದೆ. ಈ ಕಥೆಯಲ್ಲೊಂದು ಸಂದೇಶವಿದೆ, ಮನರಂಜನೆಯಿದೆ, ಲವಲವಿಕೆಯ ನಡೆಯಿದೆ. ಸಾಮಾನ್ಯವಾಗಿ ಜನರಲ್ಲಿ ಒಂದು ನಂಬಿಕೆಯಿದೆ, ಇದೊಂದು ಸಣ್ಣ ಪಾತ್ರ, ಈ ಪಾತ್ರವನ್ನು ಯಾರು ಬೇಕಾದರೂ ನಿಭಾಯಿಸಬಲ್ಲರು ಎಂದು.. ಆದರೆ ಆ ಪಾತ್ರದ ವಿಶೇಷತೆಯನ್ನು ಅರ್ಥ ಮಾಡಿಕೊಂಡು ಪ್ರದರ್ಶನ ನೀಡಿದಾಗಲಷ್ಟೇ ಆ ಕಥೆಯ ಮಹತ್ವ ಹಾಗೂ ಘನತೆಗೆ ನ್ಯಾಯ ನೀಡಿದಂತೆ. ಭಗವಂತನ ಅಸ್ತಿತ್ವ ಸಕಲ ಚರಾಚರಗಳಲ್ಲೂ ಇದೆ, ಆತ ಸರ್ವವ್ಯಾಪಿ ಎಂಬುದನ್ನು ಈ ಪ್ರಸಂಗದಲ್ಲಿ ಶ್ರೀಕೃಷ್ಣ ವೇದ್ಯಗೊಳಿಸುತ್ತಾನೆ. ಶ್ರೀಕೃಷ್ಣನ ದೈವತ್ವವನ್ನು ಅರಿತುಕೊಳ್ಳದ ಚಂದಗೋಪ ಹಾಗೂ ಚಂದ್ರಾವಳಿ ಶ್ರೀ ಕೃಷ್ಣನನ್ನು ಸಾಮಾನ್ಯ ಪುಂಡನೆಂದುಕೊಂಡಿರುತ್ತಾರೆ. (ಚಂದ್ರಾವಳಿಗೆ ಒಂದು ರೀತಿಯ ಶೀಲಮದವೆಂದು ಹೇಳಬಹುದು). ಒಂದಲ್ಲ ಒಂದು ರೀತಿಯಿಂದ ಪ್ರತಿಯೊಂದು ಜೀವಿಯೂ ಭಗವಂತನ ಸೂತ್ರಕ್ಕೊಳಪಟ್ಟವರು ಎಂಬುದೇ ಈ ಕಥೆಯ ಸಂದೇಶ. ತನ್ನೊಳಗಿನ ಮದವಿಳಿದಾಗ ದೇವದರ್ಶನವಾಗುತ್ತದೆ ಎಂಬುದನ್ನು ಸಾರುವ ಈ ಪ್ರಸಂಗದುದ್ದ ನಡೆಯುವ ತಿಳಿ ಹಾಸ್ಯದ ಸಂಭಾಷಣೆಗಳೇ ನೋಡುಗನಿಗೂ ಕಲಾವಿದನಿಗೂ ಮುದ ನೀಡುವಂತದ್ದು. ವೇಷಧಾರಿಗೆ ತೂಕಬದ್ಧವಾದ ಅರ್ಥಗಾರಿಕೆಯಿಂದ ಒಳಾರ್ಥಗಳನ್ನು ನೀಡಬಲ್ಲ ಸಾಕಷ್ಟು ಅವಕಾಶಗಳಿವೆ. ಬಡಗಿನಲ್ಲಿ ಚಂದ್ರಾವಳಿ ಪಾತ್ರಕ್ಕೆ ಇಂಥದ್ದೇ ನಡೆ ಎಂಬುದನ್ನು ಗುರುತಿಸಬಹುದಾದರೆ ಅಥವ ಅನುಸರಿಸಬಹುದಾದರೆ, ಅದು ಮಂದಾರ್ತಿ ಎಂ ಎ ನಾಯಕರು ಚಂದ್ರಾವಳಿಯ ಪಾತ್ರವನ್ನು ನಿರ್ವಹಿಸುವ ರೀತಿ. ನಾನೂ ಚಂದ್ರಾವಳಿ ಪಾತ್ರ ನಿರ್ವಹಿಸುವಾಗ ಅವರದ್ದೇ ನಡೆಯನ್ನು ಅನುಸರಿಸುತ್ತೇನೆ. ಮೇಲಿಂದ ಮೇಲೆ ಒಂದೆ ಪಾತ್ರವನ್ನು ನಿರ್ವಹಿಸುವಾಗ ಏನಾದರು ಹೊಸತನ ತರಬಹುದೇ ಎಂದು ಕೆಲವರು ಕೇಳುವುದಿದೆ. ಆದರೆ ಹೊಸತನ ಅಂದ್ರೆ ಪ್ರಸಂಗದ ನಡೆಯನ್ನು ಮೀರಿ ಇನ್ನೇನನ್ನೋ ತುರುಕಲಾಗುವುದಿಲ್ಲ. ವೇಷಧಾರಿಯು ಬಳಸುವ ಭಾಷೆ, ಪದಪ್ರಯೋಗಗಳಲ್ಲಿ ಬದಲಾವಣೆ ಮಾಡುವುದರ ಮೂಲಕ ಏಕತಾನತೆಯನ್ನು ಕಡಿಮೆ ಮಾಡಿಕೊಳ್ಳಬಹುದು. ಕಲಾವಿದರು ಸಭಿಕರನ್ನು ಗಮನಿಸಿ ಸಂದರ್ಭಕ್ಕೆ ಬೇಕಾದ ಹಾಗೆ ಹಾಸ್ಯ, ಶೃಂಗಾರವನ್ನು ಹೆಚ್ಚು ಕಡಿಮೆ ಮಾಡಿಕೊಳ್ಳುತ್ತೇವೆ. ನಾನು ಚಂದ್ರಾವಳಿ ಪಾತ್ರ ನಿರ್ವಹಿಸಿದಾಗ ನನ್ನೆದುರು ಕೃಷ್ಣನಾಗಿ ಮಂಕಿ ಈಶ್ವರ ನಾಯಕ್, ತೀರ್ಥಹಳ್ಳಿ ಗೋಪಾಲ್ ಆಚಾರ್, ಪ್ರಸನ್ನ ಶೆಟ್ಟಿಗಾರ್, ರಾಜೇಶ್ ಭಂಡಾರಿ, ನಾಗರಾಜ್ ಭಂಡಾರಿ, ಚಂದ್ರಹಾಸ ಗೌಡ, ವಿಶ್ವನಾಥ್ ಹೆನ್ನಾಬೈಲ್, ಕಣ್ಣಿಮನೆ ಗಣಪತಿ ಭಟ್, ಕಡಬಾಳ, ಕಿರಾಡಿ ಪ್ರಕಾಶ್, ಹರೀಶ್ ಜಪ್ತಿ ಮೊದಲಾದವರು ಪಾತ್ರ ನಿರ್ವಹಿಸಿದ್ದಾರೆ. ನನ್ನ ಎದುರು ವೇಷಧಾರಿಗಳ ಹೊಂದಾಣಿಕೆ ಹಾಗೂ ಸ್ಪಂದನೆಯಿಂದಾಗಿಯೇ ಪ್ರತೀ ಬಾರಿಯೂ ಪಾತ್ರ ಮಾಡಿದಾಗ ಆ ಪಾತ್ರ ಹೆಚ್ಚು ಜೀವಂತವಾಗಿ ಮೂಡಿ ಬರುತ್ತದೆ. ಒಂದೇ ಪಾತ್ರವನ್ನು ಅದೆಷ್ಟೇ ಸಲ ನಿರ್ವಹಿಸಿದ್ದರೂ ಹೊಸತನ ಕೊಡಬೇಕೆನ್ನುವ ತುಡಿತ ಕಲಾವಿದನಾದವನಲ್ಲಿ ಇರಲೇಬೇಕು. ಇದು ಚಂದ್ರಾವಳಿ ಪಾತ್ರದ ನನ್ನ ಅನುಭವ. ಹಿಂದಿನ ತಿಂಗಳಿನಲ್ಲಿ ನಡೆದ ಮತ್ತೊಂದು ಪ್ರಮುಖವಾದ ಕಾರ್ಯಕ್ರಮ, ನಮ್ಮದೇ ಟ್ರಸ್ಟ್ ಹಾಗೂ ಶ್ರೀ ಲಕ್ಷ್ಮಿ ವೆಂಕಟರಮಣ ಕೃಪಾಪೋಷಿತ ಯಕ್ಷಗಾನ ಕಲಾಸಂಘ ಶ್ರೀ ಕ್ಷೇತ್ರ ಶಂಕರಪ್ಪನಕೊಡ್ಲು ಕೆಂಚನೂರು ಇವರ ಸಹಭಾಗಿತ್ವದಲ್ಲಿ ಪ್ರದರ್ಶನ ಕಂಡ ಚಂದಮಾಮ ಎಂಬ ಪ್ರಸಂಗ.

ಮೊದಲ ಬಾರಿಗೆ ಶಿಶು ಸಾಹಿತ್ಯದ ವರ್ಗಕ್ಕೆ ಬರುವ ಶಿಶು ಪ್ರಸಂಗ ಯಕ್ಷಗಾನದಲ್ಲಿ ಪ್ರಯೋಗವಾಗಿರೋದು ನಮ್ಮ ಸಂಸ್ಥೆಯ ಮೂಲಕ ಅನ್ನೋದು ನಮ್ಮ ಹೆಗ್ಗಳಿಕೆ. ಶಂಕರಪ್ಪನ ಕೊಡ್ಲು ಜಾತ್ರೆಯ ಪ್ರಯುಕ್ತ ದಿನಾಂಕ 11–04–2022 ರ ಸೋಮವಾರದಂದು ಶ್ರೀ ಲಕ್ಷ್ಮಿ ವೆಂಕಟರಮಣ ದೇವಳದ ಪ್ರಾಂಗಣದಲ್ಲಿ ಈ ಶಿಶು ಪ್ರಸಂಗ ಯಶಸ್ವಿಯಾಗಿ ಪ್ರದರ್ಶನವಾಯಿತು. ಮಕ್ಕಳ ಸೈಕಾಲಜಿಗೆ ಅತ್ಯಂತ ಸೂಕ್ತ ಮತ್ತು ಹತ್ತಿರವಾಗಬಲ್ಲ ಪ್ರಸಂಗ ಇದು ಎಂದು ಧೈರ್ಯವಾಗಿ ಹೇಳಬಲ್ಲೆ. ಈ ಪ್ರಸಂಗದಲ್ಲಿ ವಿಮರ್ಶೆ ಮಾಡಬಲ್ಲಂತಹಾ ಮಹತ್ತರ ವಿಷಯಗಳಿಲ್ಲದೇ ಹೋದರೂ ಮಕ್ಕಳೊಂದಿಗೆ ಮಕ್ಕಳಾಗಿ ಒಂದೂವರೆ ಗಂಟೆಗಳಷ್ಟು ಕಾಲ ಮನಸೋ ಪೂರ್ತಿ ದೊಡ್ಡವರೂ ಆಸ್ವಾದಿಸಬಲ್ಲ ಪ್ರಸಂಗವಿದು. ಮಕ್ಕಳ ಸಮ್ಮೋಹಕ ವಸ್ತು ಚಂದ್ರನ ಸುತ್ತಲೇ ಈ ರಮ್ಯ ಕಥಾವಸ್ತು ಹಣೆದುಕೊಂಡಿದೆ. ಸರಳ ನಿರೂಪಣೆಯಿಂದ ಕೂಡಿದೆ. ಈ ಪ್ರಯೋಗಕ್ಕೆ ನಮ್ಮೊಂದಿಗೆ ಕೈಜೋಡಿಸಿದ ಶ್ರೀ ಲಕ್ಷ್ಮಿ ವೆಂಕಟರಮಣ ಕೃಪಾಪೋಷಿತ ಯಕ್ಷಗಾನ ಕಲಾಸಂಘದ ಸಹಕಾರ ಹಾಗೂ ಪ್ರೋತ್ಸಾಹ ಸ್ಮರಣೀಯ. ಸನ್ನಿವೇಶವೊಂದರಲ್ಲಿ ತೂಗು ತೊಟ್ಟಿಲಲ್ಲಿ ಚಂದ್ರ ಧರೆಗಿಳಿದು ಬರುವ ದೃಶ್ಯ ಹಾಗೂ ಚಂದ್ರನೂರಿಗೆ ಪುಟ್ಟ ಕಂದನನ್ನು ಚಂದ್ರನ ತೇರಿನಲ್ಲಿ ಕರೆದೊಯ್ಯುವ ದೃಶ್ಯ ಸಭಿಕರ ಮನಸೂರೆಗೊಂಡಿತ್ತು. ಸಂತಸದ ವಿಚಾರವೆಂದರೆ ಇಂತಹ ರಿಸ್ಕಿ ಪ್ರದರ್ಶನಕ್ಕೆ ಮಕ್ಕಳ ತಂಡ ಮತ್ತು ನಿರ್ದೇಶಕರು ಮಾನಸಿಕವಾಗಿ ಸಿದ್ಧವಾಗಿದ್ದು ಹಾಗೂ ಮಕ್ಕಳ ಪೋಷಕರ ಬೆಂಬಲ ಸಹಕಾರವೇ ಈ ಪ್ರದರ್ಶನ ಯಶಸ್ವಿಯಾಗಲು ಸಹಕಾರಿಯಾಯ್ತು. ಅಂದಿನ ಪ್ರದರ್ಶನದ ಯಶಸ್ಸಿನ ಸಿಂಹಪಾಲು ಭಾಗವತರಾದ ಶ್ರೀ ನವೀನ್ ಕೋಟ, ಮದ್ದಳೆವಾದಕರು ಗಣೇಶ್ ಶೆಣೈ ಶಿವಪುರ, ಚೆಂಡೆ ವಾದಕರು ಭಾಸ್ಕರ್ ಆಚಾರ್ಯ ಕನ್ಯಾನ ಮತ್ತು ದೇವಳದ ಮುಖ್ಯಸ್ಥರಿಗೆ ಸಲ್ಲಬೇಕು. ಪುಟಾಣಿಗಳಾದ ತ್ರಿಶಾ ಶಿವಕುಮಾರ, ದಶಮಿ, ತನ್ವಿ, ಸಾನ್ವಿ, ಪ್ರಥಮ್, ಹಾಗೂ ಸ್ವದಿಶ್ ಕ್ರಮವಾಗಿ ಚಂದ್ರಹಾಸ, ಶೀತಲ, ಶಶಿಮುಖಿ, ಚಂದ್ರ, ಶ್ಯಾಮ, ಗಣಪತಿ, ಮತ್ತು ಈಶ್ವರನ ಪಾತ್ರಗಳಿಗೆ ಬಣ್ಣ ಹಚ್ಚಿದ್ದರು. ಇಂತಹ ಅನೇಕ ಪ್ರಯತ್ನಗಳಿಂದ ಟ್ರಸ್ಟ ನ ಫೂಟ್ ಪ್ರಿಂಟ್ ಮೂಡಿಸುವತ್ತ ನಾವು ಬೆಳೆಯುತ್ತಿದ್ದೇವೆ. ನಿಮ್ಮ ಸಹಕಾರವಿರಲಿ.

**ವಂದನೆಗಳೊಂದಿಗೆ**

**ವಂಡಾರು ಗೋವಿಂದ, ಕಲಾವಿದ**

## ಸಂಪಾದಕೀಯ

ಆತ್ಮೀಯ ಓದುಗರೆ,



ಅಜಿತ್ ಕಾರಂತ್
ಗೌರವ ಸಂಪಾದಕರು

ಡಿಜಿಟಲ್ ಪತ್ರಿಕೆಯ ಎರಡನೆಯ ಹೆಜ್ಜೆಯಿದು. ಮೊದಲನೇ ಹೆಜ್ಜೆಯಲ್ಲಿ ನಮ್ಮೊಂದಿಗೆ ಹೆಜ್ಜೆಹಾಕಿದ ಸಹೃದಯ ಓದುಗರು, ನಿಮ್ಮ ಪತ್ರಿಕೆ ಚೆನ್ನಾಗಿದೆ, ಅಕ್ಷರ ಸ್ವಲ್ಪ ದೊಡ್ಡದು ಮಾಡಬಹುದೇ? ಲೇಖನಗಳನ್ನು ಸಂಕ್ಷಿಪ್ತಗೊಳಿಸಬಹುದೇ? ಹೆಚ್ಚು ವಿಷಯಗಳನ್ನು ಇಟ್ಟುಕೊಳ್ಳದೇ ಸೀಮಿತವಾಗಿ ವಿಷಯ ಮಂಡಿಸಬಹುದೇ? ಎಂಬಿತ್ಯಾದಿ ಅನಿಸಿಕೆಗಳನ್ನು ಹಂಚಿಕೊಂಡಿದ್ದೀರಿ. ಅದಕ್ಕಾಗಿ ಹೃತ್ಪೂರ್ವಕ ವಂದನೆಗಳು. ವಿಷಯ ವಿಸ್ತಾರವಾಗುವುದು ಅದರ ನಿರೂಪಣೆಯಿಂದ ಮಾತ್ರವಲ್ಲ! ವಸ್ತುವಿನ ಆಳ–ಅಗಲಗಳಿಂದ. ಹಾಗಾಗಿ ಕೆಲವು ಲೇಖನಗಳನ್ನು ಸರಣಿಯಾಗಿ ಪ್ರಕಟಿಸುತ್ತಿದ್ದೇವೆ. ಈ ಬಾರಿ ಅಕ್ಷರವೂ ಸ್ವಲ್ಪ ದೊಡ್ಡದಿದೆ.

ಈ ಎರಡನೆಯ ಹೆಜ್ಜೆಯಲ್ಲಿ ಗೆಜ್ಜೆಕಟ್ಟುವ ಕಲಾವಿದರ ಬಗ್ಗೆ ದೃಷ್ಟಿಹರಿಸೋಣ....ಬನ್ನಿ... ಪ್ರಸಂಗದ ನಡೆ, ಪಾತ್ರದ ಸ್ವಭಾವ, ತನ್ನ ಕಲಿಕೆಯ ಹಿನ್ನೆಲೆಯೊಂದಿಗೆ, ಹಿರಿಯರ ಮಾರ್ಗದರ್ಶನದಲ್ಲಿ ವೇಷಮಾಡುವ ವೇಷಧಾರಿಯೊಬ್ಬ ಅನೇಕ ಸವಾಲುಗಳನ್ನು ಎದುರಿಸುತ್ತಾನೆ. ತಾನು ಪಾತ್ರವಾಗಿ ನ್ಯಾಯಸಲ್ಲಿಸುವುದರೊಂದಿಗೇ ಪ್ರೇಕ್ಷಕರ ಮನತಣಿಸುವುದೂ ಮರೆಯುವಂತಿಲ್ಲ. ಕೆಲವೊಮ್ಮೆ ನೋಡುಗರ ಅಭಿರುಚಿಗೆ ಬೇಕೆನ್ನುವಂತೆ ಕನಿಷ್ಠಮಟ್ಟದ ಪ್ರಸ್ತುತಿಯೂ ಕಲಾವಿದನಿಂದ ಆಗುತ್ತದೆ. ಇಲ್ಲ. ನಾನು ಮಟ್ಟಕ್ಕೆ ಇಳಿಯಲಾರೆ! ಎಂದು ಮಡಿವಂತಿಕೆ ತೋರುವ ಕಲಾವಿದ ನೇಪಥ್ಯದಲ್ಲೇ ಉಳಿಯುತ್ತಾನೆ.ಇದು ನಿಜಕ್ಕೂ ದುರಂತ! ಇದಕ್ಕೆ ಯಾರು ಹೊಣೆ? ಇತ್ತೀಚಿನ ದಿನಗಳ ರಂಗಸ್ಥಳ ದೇವಲೋಕ, ಪಾತಾಳವೇ ಮೊದಲಾದ ಲೋಕಾಂತರಗಳಾಗದೇ ನಮ್ಮ ಮನೆಯ ಜಗುಲಿಯಾಗಿಯೇ ಉಳಿಯುತ್ತಿರುವುದು ಅನಪೇಕ್ಷಿತ ವಿಚಾರ. ಇದನ್ನು ಎಲ್ಲರೂ ತಮ್ಮ ಮಾತುಗಳಲ್ಲಿ ಹೇಳುತ್ತಾರೆಯಾದರೂ, ಅನುಷ್ಠಾನಕ್ಕೆ ಬಂದಿಲ್ಲ..ಸಾಹಿತ್ಯ ಶುದ್ಧಿಯಿಲ್ಲದ, ರಸಭಾವ ಸ್ಫುರಿಸದ, ವಿಮರ್ಶೆಗೆ ವಿಷಯವಿರದ ಕಾಡುಹರಟೆಗಳೇ ಯಕ್ಷಗಾನದ ಅರ್ಥವಾಗಿಯೂ, ಸಿನಿಮಾಮಾದರಿಯ ಲಘುಸಂಗೀತ, ಸಾಹಿತ್ಯಗಳೇ ಪದ್ಯಗಳಾಗಿಯೂ ರಂಗವಾಳುತ್ತಿವೆ. ಕಲಾವಿದರನ್ನು ಪ್ರಶ್ನಿಸಿದರೆ, ಪ್ರೇಕ್ಷಕರಿಗಾಗಿ ಎನ್ನುವ ಉತ್ತರದೊಂದಿಗೆ ಬದ್ಧರಾಗಿರುವುದು ಕಾಣಿಸುತ್ತದೆ. ವೇಷವೈವಿಧ್ಯವೂ ಮರೆಯಾಗಿ ನಾಟಕೀಯ ವೇಷಗಳು ರಂಗವನ್ನು ತುಂಬುತ್ತಿವೆ. ಇನ್ನು ಶೈಲಿಯ ಕುರಿತಾಗಿ ನೋಡಿ.... ಹಿಂದೆ ಒಬ್ಬೊಬ್ಬ ಕಲಾವಿದನದ್ದೂ ಒಂದೊಂದು ಶೈಲಿ ಎದ್ದುಕಾಣಬಹುದಾಗಿತ್ತು. ಈಗ ಪ್ರಸಿದ್ಧರಾದವರ ಶೈಲಿಯೇ ಇಡೀ ಮೇಳದವರಿಗೆ ಅನುಕರಣೀಯವಾಗಿದೆ! ಹಾಗಾದರೆ ಸ್ವಂತಿಕೆ ಇಲ್ಲದ ಕಲಾವಿದರೇ ಹೆಚ್ಚಾಗಿದ್ದಾರಾ!? ಇನ್ನು ಅಧ್ಯಯನದ ಕುರಿತು ಹೇಳುವುದಾದರೆ, ನಿರಾಶೆಯೇ ಕಾದಿದೆ! ಕೇವಲ ಬೆರಳೆಣಿಕೆ ಕಲಾವಿದರು ಅಧ್ಯಯನಶೀಲರು. ಉಳಿದವರಿಗೆ ಅದರ ಮಹತ್ವ ಗೊತ್ತಾಗುವ ದಿನ ಯಾವಾಗ!?? ಒಂದು ಸಣ್ಣ ಉದಾಹರಣೆ ಕೊಡಲು ಬಯಸುತ್ತೇನೆ.... ಎಂಟುನೂರು ವರ್ಷ ಬದುಕಿದ ಭೀಷ್ಮ... ಎಂದು ಎಲ್ಲಾ ಕಲಾವಿದರೂ ಹೇಳಿ, ಹೇಳಿ ಈಗ ಅದುವೇ ನಿಜವಾಗಿದೆ!!! ಇದಕ್ಕೆ ಆಧಾರವೆಲ್ಲಿದೆ!?? ಪುರಾಣದಲ್ಲಿದೆಯೇ!? ಪ್ರಸಂಗದಲ್ಲಿದೆಯೇ!?? ಗೊತ್ತಿಲ್ಲ... ಇದು ಒಂದು ಸಣ್ಣ ಉದಾಹರಣೆಯಷ್ಟೇ.... ಇಂತಹಾ ಅನೇಕ ಅಪಸವ್ಯಗಳ ನಡುವೆ ನಮ್ಮ ಯಕ್ಷಗಾನ ವಿಜೃಂಭಿಸಿದೆ...ಬೆಳೆದಿದೆ...ಭವಿಷ್ಯ ಕಾಣಿಸುತ್ತಿದೆ... ಇನ್ನಾದರೂ ಕಲಾವಿದರು ವಿದ್ವಾಂಸರಾಗಿ ಬೆಳೆದು ಬರಲಿ ಎಂದು ಆಶಿಸೋಣ....

## ಡಿಜಿಟಲೀಕರಣದಿಂದ ಯಕ್ಷಗಾನಕ್ಕೆ ಹಾನಿ?? : ಯಕ್ಷಗಾನದ ಮೂಲ ಸ್ವರೂಪ ಉಳಿಸುವ ಪ್ರಯತ್ನ ಮೊದಲಾಗಲಿ..!!

ಪ್ರಸ್ತುತ ಸಂವಾದದ ವಿಷಯ "ಡಿಜಿಟಲ್ ಮಾಧ್ಯಮಗಳ ಬಳಕೆ ಯಕ್ಷಗಾನಕ್ಕೆ ಪೂರಕವೋ ಅಥವಾ ಮಾರಕವೋ" ಎಂಬುದಾಗಿ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಡಿಜಿಟಲೀಕರಣ ಒಂದು ದೊಡ್ಡ ಮೈಲಿಗಲ್ಲು. ತನ್ಮೂಲಕ ಯಾವುದೇ ಪಠ್ಯ, ಚಿತ್ರ ಅಥವಾ ಶಬ್ದವನ್ನು ರೂಪಾಂತರಗೊಳಿಸಿ ಶೇಖರಿಸಿ, ಪ್ರಸರಣ ಮಾಡಬಹುದಾಗಿದೆ ಮತ್ತು ಕಂಪ್ಯೂಟರ್ ಮತ್ತು ಮೊಬೈಲ್‌ಗಳ ಮೂಲಕ ನೋಡಬಹುದಾದುದೇ ಒಂದು ದೊಡ್ಡ ಪ್ರಯೋಜನ. ಆದರೆ ಈ ವೈಜ್ಞಾನಿಕ ಆವಿಷ್ಕಾರಗಳ ಬಳಕೆಯ ಕಾಲಕ್ಕೆ ಬರ್ಟ್ರಂಡ್ ರೆಸಲ್ ರವರ "The Impact of science on society" ನನ್ನ ಕಿವಿಯಲ್ಲಿ ಸದಾ ಅನುರಣಿಸುತ್ತಿದೆ. ಹಾಗಾಗಿ ಅದರ ಕೆಡುಕನ್ನು ಪರಾಂಬರಿಸಿ, ಯಕ್ಷಗಾನದಲ್ಲಿ ಬಳಸಬಹುದೇ ಎಂಬ ತೀರ್ಮಾನ ಉತ್ತಮ. ಪ್ರದರ್ಶನವನ್ನು ನೇರ ನೋಡುವಾಗ ದೊರೆಯುವ ಮುದ ಹಾಗೂ ಭಾವುಕತೆ ಡಿಜಿಟಲೀಕರಣದಲ್ಲಿ ದೊರೆಯುವುದಿಲ್ಲ. ಈ ಮಾಧ್ಯಮದ ಮೂಲಕ ದೊರೆಯುವ ಸಂದೇಶ ಪ್ರಶ್ನಾರ್ಹ. ಇದರ ಬಳಕೆಯಿಂದ ಜನ ಸಮುದಾಯದಿಂದ ಪ್ರತ್ಯೇಕವಾಗಿ ಉಳಿಯುತ್ತಾರೆ. ಯಕ್ಷಗಾನ ಒಂದು ಶೈಲೀಕೃತ ದೃಶ್ಯ ರೂಪಕ. ಇಲ್ಲಿ ಪರಂಪರೆಗೆ ಪ್ರಾಶಸ್ತ್ಯ ಹೆಚ್ಚು. ಈಗ ಈ ಪರಂಪರೆಯನ್ನು ಮೀರಿ ಅಪಸವ್ಯಗಳು ಅನುಚಿತ ಸನಿವೇಶಗಳು ಹಾಗೂ ಅನ್ಯ ಕಲೆಗಳ ಸಂಕರೀಕರಣ ಅವ್ಯಾಹತವಾಗಿ ನಡೆಯುತ್ತಿದ್ದು, ಅಂಥ ದೃಶ್ಯ ಶ್ರಾವ್ಯಗಳು ನೇರ ವಿಶ್ವದಾದ್ಯಂತ ಆನ್ಲೈನ್ ಮೂಲಕ ಪ್ರಸರಣಗೊಳ್ಳುತ್ತಿದೆ. ಪರಿಣಾಮವಾಗಿ ಈಗಾಗಲೇ ಯಕ್ಷಗಾನದ ಮೂಲ ಸ್ವರೂಪಕ್ಕೆ ಸಾಕಷ್ಟು ಹಾನಿಯಾಗಿದೆ.

ಯಕ್ಷಗಾನದ ಕುರಿತಾದ ನೈಜ ಕಾಳಜಿಯುಳ್ಳವರು ಈ ಹಾನಿಯಾಗುತ್ತಿರುವುದನ್ನು ತಡೆಯುವ ಯೋಜನೆಯನ್ನು ರೂಪಿಸಬೇಕಾಗಿದೆ. ಯಕ್ಷಗಾನಕ್ಕೆ ಪ್ರಚಾರ ಬೇಕಾಗಿಲ್ಲ. ಯಾರ ಪ್ರೋತ್ಸಾಹ ಹಾಗೂ ಪ್ರಚಾರವಿಲ್ಲದೇ ಶತಮಾನಗಳಿಂದ ಉಳಿದು ಬಂದ ಕಲೆ ಯಕ್ಷಗಾನ. ಈಗ ಅದರ ನೆಲೆಗಟ್ಟು ಶಿಥಿಲಗೊಳ್ಳುತ್ತಿದೆ, ಮೂಲ ಸ್ವರೂಪಕ್ಕೆ ಹಾನಿಯಾಗುತ್ತಿದೆ. ಅದರ ರಕ್ಷಣೆಗೆ ಆದ್ಯತೆ ನೀಡಬೇಕಾಗಿದೆ. ಡಿಜಿಟಲ್ ಮಾಧ್ಯಮ ಯಕ್ಷಗಾನ ಕಲಿಕೆ, ಮಾಹಿತಿ ಸಂಗ್ರಹ ಮತ್ತು ದಾಖಲಾತಿಗೆ ಪೂರಕವಾದೀತು. ಅಲ್ಲಿಗೆ ಮಿತಿಗೊಳಿಸುವುದು ವಿಹಿತ. ಪ್ರದರ್ಶನದಲ್ಲಿ ಅದರ ಬಳಕೆ ಕಲೆಗೆ ಮಾರಕವೇ ಆದೀತು ಎನ್ನುವುದರಲ್ಲಿ ಅನುಮಾನವಿಲ್ಲ.

**ಲೇಖಕರು: ಬೇಳೂರು ರಾಘವ ಶೆಟ್ಟಿ, 'ಕೃಷ್ಣದೇವ' ಚಿತ್ರಪಾಡಿ**

## ಡಿಜಿಟಲ್ ಮಾಧ್ಯಮ ಯಕ್ಷಗಾನಕ್ಕೆ ಪೂರಕವೇ? ಮಾರಕವೇ?

ಈ ವಿಚಾರದಲ್ಲಿ ಒಂದು ತಾರ್ಕಿಕ ಹಂತವನ್ನು ತಲುಪುವ ಮೊದಲು ಯಕ್ಷಗಾನ ಕಲೆಯ ಬಗ್ಗೆ ಒಂದಷ್ಟು ತಿಳಿವ ಅಗತ್ಯ ಇದೆ.

***ಅರಾಧನೆಯಾಗಿ ಯಕ್ಷಗಾನ ಕಲೆ:*** ಕರ್ನಾಟಕ ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳನ್ನು ಕೇಂದ್ರವಾಗಿರಿಸಿಕೊಂಡು, ಆದಿಮ ಸಂಸ್ಕೃತಿಯ ಪ್ರತೀಕವಾದ , ಭೂತಾರಾಧನೆ ಹಾಗೂ ನಾಗಾರಾಧನೆಯಾದಿಯಾಗಿ ಜನಪದೀಯ ಮೂಲದ ಆರಾಧನಾ ಕಲೆಯನ್ನು ಹೊರತುಪಡಿಸಿ ಅನ್ಯ ರಂಗದ ಮನೋರಂಜನೆಯ ಮೂಲವೇ ಇಲ್ಲದ ಕಾಲದಲ್ಲಿ, ಯಕ್ಷಗಾನ ಕಲೆಯನ್ನೇ ಏಕೈಕ ಮನೋರಂಜನೆಯ ಮೂಲವಾಗಿರಿಸಿದ ಜನಪದರು ತಮ್ಮ ಬೇಸಾಯ ಕಸುಬಿನ ಬಿಡುವಿನಲ್ಲಿ ರಂಜನೆಗಾಗಿ ಆಶ್ರಯಿಸಿದರು. ರಂಜನಾಗುಣವಿದ್ದ ಯಕ್ಷಗಾನ ಕಲೆಯು ಮನೋರಂಜನೆಯ ಕಲೆಯಾಗಿಯೂ ಅಸ್ತಿತ್ವವನ್ನು ಪಡೆಯಿತು.ಅಸ್ಮಿತೆಯನ್ನು ಹೊಂದಿತು.ಗಾಢ ಕತ್ತಲಿನ ಹಾಗೂ ನಿಶ್ಯಬ್ದ ರಾತ್ರಿಯ ನೀರವ ಮೌನದಲ್ಲಿ ಯಾವುದೇ ರೀತಿಯ ಧ್ವನಿವರ್ಧಕಗಳ,ಪ್ರಖರ ಬೆಳಕಿನ ಸಹಾಯವಿಲ್ಲದೆ ದೊಂದಿ ಬೆಳಕಿನಲ್ಲಿ ಪ್ರದರ್ಶನಗೊಳ್ಳುತ್ತಿದ್ದ ಯಕ್ಷಗಾನ ಬಯಲಾಟಕ್ಕೆ ಯಾವುದೇ ರೀತಿಯ ಅನ್ಯ ಪ್ರಚಾರವಿಲ್ಲದೆ ಕೇವಲ ಕೇಳಿ ಅನ್ನುವ ಚೆಂಡೆಯ ಸದ್ದಿಗೆ ಎಚ್ಚರಗೊಂಡ ಪ್ರೇಕ್ಷಕ ಮೈಲುಗಟ್ಟಲೇ ದೂರದಿಂದ ಯಕ್ಷಗಾನ ರಂಗಸ್ಥಳದತ್ತ ಧಾವಿಸಿ ಬಂದು ಯಕ್ಷಗಾನವನ್ನು ಆಸ್ವಾದಿಸುತ್ತಿದ್ದ.ಸುತ್ತಮುತ್ತಲಿನ ಊರಿನ ಕನಿಷ್ಠ 200 ರಿಂದ 500 ಸಂಖ್ಯೆಯ ತನಕವೂ ಒಟ್ಟು ಸೇರಿ ಯಕ್ಷಗಾನ ಪ್ರದರ್ಶನವನ್ನು ಕಳೆಗಟ್ಟಿಸುತಿದ್ದರು. ಇದು ಗತಕಾಲದ ವೈಭವ. ಇದು ಪ್ರಾಚೀನ ರಂಗಭೂಮಿ ಅನ್ನುವ ಪರಿಕಲ್ಪನೆ.



ಸಾಂದರ್ಭಿಕ ಚಿತ್ರ

***ಯಕ್ಷಗಾನ ಕಲೆಯ ಪ್ರದರ್ಶನ ಆಯಾಮ:*** ಯಕ್ಷಗಾನ ಕಲೆಯ ಪ್ರದರ್ಶನದ ಆಯಾಮದಲ್ಲಿ ಎರಡು ವಿಧಾನ ಇದೆ.ಒಂದು ಆರಾಧನೆ ಇನ್ನೊಂದು ಮನರಂಜನೆ, ಆರಾಧನೆ ದೃಷ್ಟಿಯಲ್ಲಿ ಪ್ರೇಕ್ಷಕರ ಸಂಖ್ಯೆಯು ಮಹತ್ತರ ಪಾತ್ರ ವಹಿಸಲಾರದು. ಯಾಕಂದರೆ ಹರಕೆದಾರನಿಗೆ ಹರಕೆ ಸಲ್ಲಿಕೆಗೆ ಪ್ರದರ್ಶನವೇ ಮುಖ್ಯ ಹೊರತು ಪ್ರೇಕ್ಷಕರಲ್ಲ. ಆತನ ನಿರೀಕ್ಷೆ ಪ್ರೇಕ್ಷಕನ ಉಪಸ್ಥಿತಿ ಹೊರತು ಸಂಪಾದನೆ ಅಲ್ಲ. ಮನರಂಜನೆ ಯನ್ನು ವ್ಯಾಪಾರವಾಗಿಸಿಕೊಂಡ ಮಾರಲು ಹೊರಟ ಯಕ್ಷಗಾನ ದಂಧೆಗೆ ಪ್ರೇಕ್ಷಕರ ಸಂಖ್ಯೆ ಪ್ರಾಮುಖ್ಯವಾಯಿತು. ಈ ಕಾರಣವಾಗಿ ಎಂಬತ್ತರ ದಶಕದಲ್ಲಿ ಯಕ್ಷಗಾನ ಕ್ಷೇತ್ರದಲ್ಲಾದ ಸುಧಾರಣೆಗಳು, ಕ್ಷೇತ್ರವಿಸ್ತರಣೆ ಹಾಗೂ ಆಧುನಿಕ ವ್ಯವಸ್ಥೆಯಿಂದ ಉಂಟಾದ ಆಕರ್ಷಣೆಯಿಂದಾಗಿ ಯಕ್ಷಗಾನ ರಂಗಸ್ಥಳದ ಎದುರಿನ ಪ್ರೇಕ್ಷಕವರ್ಗದ ಸಂಖ್ಯೆಯಲ್ಲಿಯೂ ವಿಸ್ತರಣೆ ಹೊಂದಿತು.ಒಂದು ಹಂತದಲ್ಲಿ ಯಕ್ಷಗಾನ ಕ್ಷೇತ್ರಕ್ಕೆ ಟಿವಿ ಮಾಧ್ಯಮಗಳಿಂದಾದ ಪ್ರೇಕ್ಷಕರ ಕೊರತೆ ನಿಧಾನವಾಗಿ ಭಾದಿಸಿದ್ದು ಸ್ಪಷ್ಟ. ಸಮರ್ಪಕ ಸಾರಿಗೆ ಸಂಪರ್ಕ ವ್ಯವಸ್ಥೆ ಇಲ್ಲದೆಯೂ ಬಂದು ಸೇರಿದ ಪ್ರೇಕ್ಷಕರ ವರ್ಗ ಹಿರಿದಾಗಿತ್ತು. ಪ್ರೇಕ್ಷಕರಿಂದಾದ ಸಂಪಾದನೆಯಿಂದ ಹೂಡಿದ ಬಂಡವಾಳವನ್ನು ಲಾಭ ಸಮೇತವಾಗಿ ಹಿಂಪಡೆಯಲು ಬಯಸಿದ ಮೇಳದ ಯಜಮಾನಿಕೆಗೆ ಮಾಧ್ಯಮ ಪ್ರಚಾರದ ಅಗತ್ಯ ಕಂಡು ಬಂತು .ಆವಾಗ ಲಭ್ಯವಿದ್ದ ಮಾಧ್ಯಮ ಸ್ವಲ್ಪ ಮಟ್ಟಿಗೆ ನೆರವಾಯಿತು ಅನ್ನಬಹುದೇನೋ. ಸುಧಾರಣೆ, ನವೀಕರಣದ ಹಂತಗಳನ್ನು ಆವರಿಸಿಕೊಂಡ ಯಕ್ಷಗಾನ ಕಲೆಯು ಹೊಸ ಅಲೆಯನ್ನು ಮೈಗೂಡಿಸಿಕೊಂಡು ಯಕ್ಷಗಾನ ಕಲೆಗೆ ಆಕರ್ಷಿತರಾದ ಯುವಪೀಳಿಗೆ ಯಕ್ಷಗಾನದ ರಂಗುರಂಗನ್ನು ಕಣ್ಣಲ್ಲಿ ತುಂಬಿಕೊಳ್ಳುತ್ತಾ ಯಕ್ಷಗಾನ ಕಲೆಯ ಅಭಿಮಾನಿಗಳಾದರು.ಇವರಿಂದ ಹೊಸ ಮಾಧ್ಯಮ ಕಲ್ಪನೆಯ ಅಳವಡಿಕೆ ಆರಂಭಗೊಂಡಿತು. ಡಿಜಿಟಲ್ ಮಾಧ್ಯಮ ವೆಂಬ ದೈತ್ಯ ಮಾಧ್ಯಮ ಸುಮಾರು 2000 ಇಸವಿಯ ಆರಂಭದ ಆಸುಪಾಸಿನಲ್ಲಿ ಡಿಜಿಟಲ್ ಮಾಧ್ಯಮವು ಸಮಾಜ ಮತ್ತು ಸಂಸ್ಕೃತಿಯ ಮೇಲೆ ಗಣನೀಯವಾಗಿ ವಿಶಾಲವಾದ ಪ್ರಭಾವವನ್ನು ಬೀರಿತು. ಇಂಟರ್ನೆಟ್ ಮತ್ತು ಪರ್ಸನಲ್ ಕಂಪ್ಯೂಟಿಂಗ್ನೊಂದಿಗೆ ಸಂಯೋಜಿಸಲ್ಪಟ್ಟ ಡಿಜಿಟಲ್ ಮಾಧ್ಯಮವು ಪ್ರಕಾಶನ, ಪತ್ರಿಕೋದ್ಯಮ, ಸಾರ್ವಜನಿಕ ಸಂಪರ್ಕಗಳು, ಮನರಂಜನೆ, ಶಿಕ್ಷಣ, ವಾಣಿಜ್ಯ ಮತ್ತು ರಾಜಕೀಯದಲ್ಲಿ ಹೊಸ ಆವಿಷ್ಕಾರವನ್ನು ಉಂಟುಮಾಡಿತು .ಈ ಕಾಲಘಟ್ಟದಲ್ಲಿ ಯಕ್ಷಗಾನ ಕ್ಷೇತ್ರದಲ್ಲಿ ಯುವಜನರ ಮೂಲಕ ಡಿಜಿಟಲ್ ಮಾಧ್ಯಮದ ಸಹಯೋಗ ಬಹಳಷ್ಟು ಪರಿಣಾಮವನ್ನು ಬೀರಿತು. ಡಿಜಿಟಲ್ ಮಾಧ್ಯಮದ ಅಗಾಧತೆಯನ್ನು ಅವಲೋಕಿಸುವುದಾದಲ್ಲಿ ಆಧುನಿಕ ಜಗತ್ತಿನ ಪ್ರತಿಯೊಂದು ವಿಭಾಗವೂ ಡಿಜಿಟಲ್ ತಂತ್ರಜ್ಞಾನ ಮಹತ್ತರವಾದ ಪ್ರಭಾವವನ್ನು, ಹಾಗೂ ಅವಶ್ಯಕತೆಯನ್ನು ಹೊಂದಿತು. ಸಂಪರ್ಕ, ಶ್ರವಣ, ಹಾಗೂ ದೃಶ್ಯಮಾಧ್ಯಮದಲ್ಲಿ ಡಿಜಿಟಲ್ ತಂತ್ರಜ್ಞಾನದಿಂದ ದೊಡ್ಡ ಕ್ರಾಂತಿಯಾಯಿತು. ಇದರ ಮುಂದುವರಿದ ಭಾಗವಾಗಿ ಬಂದ ಗೂಗಲ್, ಫೇಸ್ ಬುಕ್, ಯು – ಟ್ಯೂಬ್, ಇನ್ನೂ ಏನೇನೋ ಚಾನೆಲ್ ಗಳು ಜನರ ಮನರಂಜನೆಯ ಜೊತೆಗೆ ಮಾಹಿತಿ ಕೇಂದ್ರಗಳಾಗಿ ಹುಟ್ಟಿಕೊಂಡವು. ಮೊಬೈಲ್ ಅನ್ನುವ ಸಣ್ಣ ಸಾಧನದ ಆವಿಷ್ಕಾರದ ಮೂಲಕ ಇಡೀ ವಿಶ್ವವೇ ಅಂಗೈಯಗಲದ ಮೊಬೈಲ್ ನಲ್ಲಿ ಅಡಕವಾಯಿತು. ಜನಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ಮೊಬೈಲ್ ಲಭ್ಯವಾದ ದೆಸೆಯಿಂದ ಪ್ರತಿಯೊಬ್ಬರ ಕೈಯಲ್ಲೂ ಮೊಬೈಲ್ ಬಂತು. ದೂರ ಸಂಪರ್ಕಕ್ಕೆ ಮೀಸಲಾದ ಮೊಬೈಲ್ ನಲ್ಲಿ ಛಾಯಾ ಚಿತ್ರೀಕರಣ ಹಾಗೂ ಧ್ವನಿಮುದ್ರಣಕ್ಕೆ ಅನುಕೂಲವಾದ ಉತ್ತಮ ದರ್ಜೆಯ ಕ್ಯಾಮೆರಾಗಳ ಜೊತೆ ಲಭ್ಯವಾಗಿ ಜನಸಾಮಾನ್ಯರಿಗೂ ಯಾವುದೇ ರೀತಿಯ ತರಬೇತಿ,ಪರಿಣತಿ ಇಲ್ಲದೆ ಅನಾಯಾಸವಾಗಿ ದೃಶ್ಯ ಹಾಗೂ ಧ್ವನಿಯನ್ನು ಮುದ್ರಿಸಿಕೊಳ್ಳುವಂತಾಯ್ತು .ಈ ಅನುಕೂಲದಿಂದ ಯಾವುದೇ ಹಾಡು ಹಾಗೂ ಭಾವಚಿತ್ರಗಳನ್ನು ,ವಿಡಿಯೋಗಳನ್ನು ಪರಿಣತ ಛಾಯಾಗ್ರಹಕನ ಸಹಾಯ ಇಲ್ಲದೆ ಸೆರೆಹಿಡಿದು ಸಮಾಜದಲ್ಲಿ ಹಂಚುವ ಅವಕಾಶ ಸುಲಭವಾಗಿ ಉಂಟಾಯಿತು. ಈ ರೀತಿಯ ಆಧುನಿಕ ತಂತ್ರಜ್ಞಾನದ ದೆಸೆಯಿಂದ ಊರಿಗೆ ಬಂದ ಮೊಬೈಲ್ ಚಿತ್ರೀಕರಣ ಯಕ್ಷಗಾನದ ಚೌಕಿಗೂ ಬಂತು .ರಂಗಸ್ಥಳಕ್ಕೂ ಬಂತು.ಕ್ಷಣ ಮಾತ್ರದಲ್ಲಿ ಮನೋವೇಗದಲ್ಲಿ ಯಕ್ಷಗಾನ ಪ್ರದರ್ಶನವನ್ನು ಇಡೀ ಲೋಕಕ್ಕೆ ಉಣಬಡಿಸಿತು.

***ಇದರಿಂದಾದ ಪೂರಕ ಅಂಶಗಳು:*** ಇಲ್ಲಿಂದ ಯಕ್ಷಗಾನವು ತನ್ನ ಪರ್ಯಾಯ ವೀಕ್ಷಕರ ಕ್ಷೇತ್ರವನ್ನು ವರ್ಧಿಸಿಕೊಂಡಿತು. ಹೌದು ಇಡೀ ರಾತ್ರಿ ರಂಗಸ್ಥಳದ ಎದುರು ಕುಳಿತು ಯಕ್ಷಗಾನ ನೋಡಲು ಸಾಧ್ಯವಿಲ್ಲದ ಇಳಿಪ್ರಾಯದವರು ಮುದುಕರು ಉದ್ಯೋಗಸ್ಥರು ತಮ್ಮ ಅನುಕೂಲಕ್ಕೆ ಬೇಕಾದ ಹಾಗೆ ತಮ್ಮ ಮನೆಯಲ್ಲಿ ಕೂತು ಯಕ್ಷಗಾನವನ್ನು ಸವಿಯುವಂತಾಯ್ತು. ಡಿಜಿಟಲ್ ದೃಶ್ಯಮಾಧ್ಯಮದ ಬಳಕೆಯಿಂದ ಮಾರ್ಕೆಟ್ ಕಲಾವಿದರ ಪ್ರಚಾರದ ಹೆಚ್ಚಳದ ಜೊತೆಗೆ ಅಪರಿಚಿತ ಕಲಾವಿದರ ಪ್ರತಿಭೆಯ ಪರಿಚಯವೂ ಜನಮಾನಸರಿಗೆ ಸುಲಭದಲ್ಲಿ ಆಯ್ತು..ಇದರಿಂದಾಗಿ ಯಕ್ಷಗಾನ ಕಲಾವಿದರಿಗೆ ಅವಕಾಶ ಹೆಚ್ಚಿ ನೈಜ ಪ್ರತಿಭೆಯುಳ್ಳ ಕಲಾವಿದರಿಗೆ

ಡಿಜಿಟಲ್ ದೃಶ್ಯಮಾಧ್ಯಮದ ಬಳಕೆಯಿಂದ ಮಾರ್ಕೆಟ್ ಕಲಾವಿದರ ಪ್ರಚಾರದ ಹೆಚ್ಚಳದ ಜೊತೆಗೆ ಅಪರಿಚಿತ ಕಲಾವಿದರ ಪ್ರತಿಭೆಯ ಪರಿಚಯವೂ ಜನಮಾನಸರಿಗೆ ಸುಲಭದಲ್ಲಿ ಆಯ್ತು...ಇದರಿಂದಾಗಿ ಯಕ್ಷಗಾನ ಕಲಾವಿದರಿಗೆ ಅವಕಾಶ ಹೆಚ್ಚಿ ನೈಜ ಪ್ರತಿಭೆಯುಳ್ಳ ಕಲಾವಿದರಿಗೆ ಸಂಪಾದನೆಯ ಅವಕಾಶವೂ ಹೆಚ್ಚಿತು. ಜೊತೆಗೆ ಅಮೂಲ್ಯವಾದ ಪ್ರದರ್ಶನಗಳು ದಾಖಲೀಕರಣ ಹೊಂದುವಲ್ಲಿ ಸಹಕಾರಿ ಆಯಿತು ಅನ್ನಬಹುದು. ಇದು ದೃಶ್ಯ ಮಾಧ್ಯಮ ಕ್ಷೇತ್ರದಲ್ಲಿ ಅದ ಕ್ರಾಂತಿಯಿಂದಾಗಿ ಯಕ್ಷಗಾನ ಕ್ಷೇತ್ರಕ್ಕಾದ ಲಾಭವೆನ್ನಬಹುದು. ಒಂದಷ್ಟು ಜನರು ಈ ಮಾಧ್ಯಮದ ಮೂಲಕ ಫೇಸ್ಬುಕ್, ಯೂಟ್ಯೂಬ್, ಇನ್ಸ್ಟಾಗ್ರಾಮ್ ಇನ್ನಿತರ ಜಾಲತಾಣಗಳಲ್ಲಿ ಈ ವಿಡಿಯೋಗಳನ್ನು ಆಡಿಯೋಗಳನ್ನು ಹಂಚಿಕೊಂಡು ಸಂಪಾದನೆಯನ್ನೂ ಕಂಡುಕೊಂಡರು.

***ದಾಖಲೀಕರಣ:*** ಈ ವಿಚಾರದಲ್ಲಿ ಮುಂದಿನ ಪೀಳಿಗೆಗೆ ಯಕ್ಷಗಾನದ ಸೊಬಗನ್ನು ಉಳಿಸಿ ಉಣಬಡಿಸುವಲ್ಲಿ ದಾಖಲೀಕರಣಗೊಳಿಸುವಲ್ಲಿ ಕ್ರಾಂತಿಕಾರಕ ಹೆಜ್ಜೆಯನ್ನೂ ಮೂಡಿಸಿತು – ಮುಂದುವರೆಯುವುದು.. .. .. ..

**ಲೇಖಕರು: ಸುರೇಂದ್ರ ಫಣಿಯೂರ್**

## ಕಲಾವಿದರಿಗೆ ತುರ್ತು ನಿಧಿ: ಯಕ್ಷಗಾನ ಕಲಾವಿದರು ಸಂಕಷ್ಟಕ್ಕೆ ಒಳಗಾದಾಗ ಸಹಾಯ ಹಸ್ತ ನೀಡಬೇಕಾದುದು ಯಾರು?

ಇತ್ತೀಚಿನ ವರ್ಷಗಳು ಯಕ್ಷಗಾನ ಕಲಾವಿದರ ಪಾಲಿಗೆ ಕಷ್ಟವನ್ನೇ ತಂದಿದೆ. ಸುಮಾರು 20 ವರ್ಷಗಳ ಹಿಂದೆ 20 ಕ್ಕೂ ಹೆಚ್ಚು ಇದ್ದ ಟೆಂಟ್ ಮೇಳಗಳು ಇಂದು ತಮ್ಮ ಸಂಖ್ಯೆಯನ್ನು ಕೇವಲ ಎರಡಕ್ಕೆ ಇಳಿಸಿದೆ. ಟೆಂಟ್ ಮೇಳಗಳು ಸ್ಥಗಿತವಾದುದು ಯಕ್ಷಗಾನ ಕಲಾವಿದರ ಪಾಲಿಗೆ ಪ್ರಥಮವಾಗಿ ದೊಡ್ಡ ಹೊಡೆತ ನೀಡಿತು .



ಆದರೂ ಬಯಲಾಟ ಮೇಳಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದ ಕಾರಣ, ಸಂಬಳ ಕಮ್ಮಿ ಎನಿಸಿದರೂ ಜೀವನೋಪಾಯಕ್ಕೆ ತೊಂದರೆಯಾಗದ ಕಾರಣ ಕಲಾವಿದರೂ ಹೊಂದಿಕೊಂಡು ಹೋದರು. ಇತ್ತೀಚೆಗೆ ಮಾರಕ ರೋಗ ಕೊರೋನಾದಿಂದಾಗಿ ಎರಡು ವರ್ಷಗಳ ಕಾಲ ಯಕ್ಷಗಾನ ಕಲಾವಿದರ ಗಳಿಕೆಯು ಮೊಟಕಾಯಿತು. ಇಂತಹ ಸಂಕಷ್ಟದ ಕಾಲದಲ್ಲಿ ಕಲಾವಿದರ ನೆರವಿಗೆ ಯಾರು ಬರಬೇಕಾದುದು ಎಂಬ ಪ್ರಶ್ನೆ ಕಲಾವಿದರಲ್ಲಿ ಆತಂಕ ತಂದಿದೆ. ರಾಜರ ಪ್ರಭುತ್ವದ ಕಾಲದಲ್ಲಿ ಕಲಾವಿದರ ಪೋಷಣೆಯ ಹೊಣೆ ಅರಸರದ್ದಾಗಿತ್ತು . ಕಲಾವಿದರಿಗೆ ರಾಜಾಶ್ರಯ ನೀಡಿ ಪ್ರೋತ್ಸಾಹಿಸುವ ಪದ್ಧತಿಯಿತ್ತು. ಭೋಜರಾಜನಂತಹ ಕಲಾಪ್ರೇಮಿ ರಾಜರು ಕವಿಗಳ ಒಂದೊಂದು ಶ್ಲೋಕಕ್ಕೆ ಅಥವಾ ಒಂದೊಂದು ಶಬ್ದಕ್ಕೆ ಲಕ್ಷ ಸುವರ್ಣ ವರಹದ ನಾಣ್ಯದ ಪಾರಿತೋಷಕ ನೀಡಿ ಪ್ರೋತ್ಸಾಹಿಸುತ್ತಿದ್ದರು ಎಂಬ ಉಲ್ಲೇಖವಿದೆ. ಆದರೆ, ಈಗ ಅರಸರ ಕಾಲ ಹೋಗಿ ಪ್ರಜಾಪ್ರಭುತ್ವದ ಕಾಲ ಬಂದಿದೆ. ಅರಸರ ಸ್ಥಾನದಲ್ಲಿ ಸರಕಾರವಿದೆ. ಆದ ಕಾರಣ ಕಲಾವಿದರ ಬೆಂಬಲಕ್ಕೆ ಬರಬೇಕಾದುದು ಸರಕಾರವೇ ಎಂಬುದು ಸುಳ್ಳಲ್ಲ. ನಾವು ಯಕ್ಷಗಾನದ ಮಟ್ಟಿಗೆ ನೋಡುವುದಾದಲ್ಲಿ ಕರ್ನಾಟಕ ಸರಕಾರವು ಯಕ್ಷಗಾನದ ಬೆಳವಣಿಗೆಗೆ, ಸಮಸ್ಯೆಗಳ ಪರಿಹಾರಕ್ಕೆ " ಯಕ್ಷಗಾನ ಅಕಾಡೆಮಿ" ಯನ್ನು ಸ್ಥಾಪಿಸಿ, ಅಧ್ಯಕ್ಷ, ಸದಸ್ಯರನ್ನೊಳಗೊಂಡು ಅದಕ್ಕೊಂದು ಸಾಂಸ್ಥಿಕ ನೆಲೆಗಟ್ಟನ್ನು ಹಾಕಿ ಕೊಟ್ಟಿದೆ. ಯಕ್ಷಗಾನ ಅಕಾಡೆಮಿಯು ಯಕ್ಷಗಾನ ಕಲಾವಿದರ ಸಂಕಷ್ಟಕ್ಕೆ ನೆರವಾಗಬೇಕಾಗಿದೆ. ಕಲಾವಿದರಿಗೆ ಮಾಸಾಶನ, ತುರ್ತು ಸಂದರ್ಭದಲ್ಲಿ ನೆರವು ಇತ್ಯಾದಿ ನೀಡಿದರೆ, ಈ ಅಕಾಡೆಮಿಗೊಂದು ಅರ್ಥ ಬಂದೀತು. ಆದರೆ ಪ್ರಸ್ತುತ ಯಕ್ಷಗಾನ ಅಕಾಡೆಮಿಗೆ ಈ ಎಲ್ಲಾ ಕಾರ್ಯ ಯೋಜನೆ ಮಾಡುವ ಪೂರ್ಣ ಅಧಿಕಾರವಿಲ್ಲ. ಸರಕಾರವು ಅಕಾಡೆಮಿಗೆ ಒದಗಿಸುವ ಅನುದಾನವೂ ಈ ಎಲ್ಲಾ ಕಾರ್ಯಕ್ರಮಗಳಿಗೆ ಸಾಕಾಗದು. ಸರಕಾರವು ಒದಗಿಸಿದ ಅನುದಾನದಲ್ಲಿ ಅಕಾಡೆಮಿಯು ಕಲಾವಿದರಿಗೆ ಪ್ರಯೋಜನವಾಗಲಿ ಅಥವಾ ಆಗದಿರಲಿ, ಕೆಲವೊಂದು ಕಾರ್ಯಕ್ರಮ ಮಾಡಿ ಕೈ ತೊಳೆದುಕೊಳ್ಳಬೇಕಾದ ಅನಿವಾರ್ಯತೆ ಅಕಾಡೆಮಿಯದ್ದು. ತಮಗಿರುವ ಸೀಮಿತ ಅಧಿಕಾರದ ನೆಲೆಯಲ್ಲಿ ಇದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸುವ ಹಾಗೂ ಇಲ್ಲ. ಸರಕಾರವು ಈ ನಿಟ್ಟಿನಲ್ಲಿ ಯೋಚಿಸಿ ಅಕಾಡೆಮಿಯು ಯಕ್ಷಗಾನ ಕಲಾವಿದರ ಸಂಕಷ್ಟದ ಕಾಲದಲ್ಲಿ ನೆರವಿಗೆ ಬರುವಂತಹ ನಿಯಮಗಳನ್ನು ಅಳವಡಿಸಿ, ಹೆಚ್ಚಿನ ಅನುದಾನ ಒದಗಿಸಿದರೆ ಅಕಾಡೆಮಿಯ ಉದ್ದೇಶ ಅರ್ಥಪೂರ್ಣವಾದೀತು. ಅಕಾಡೆಮಿಯ ಸದಸ್ಯರು ಈ ನಿಟ್ಟಿನಲ್ಲಿ ಸರಕಾರದ ಮೇಲೆ ಒತ್ತಡ ಹಾಕಿ ಅಕಾಡೆಮಿಯ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಬಹುದು. ಈಗಿನ ನಿಯಮ ಬದಲಿಸಿ, ಅಂದರೆ ವಶೀಲಿಯ ಮೂಲಕ ಸದಸ್ಯರನ್ನು ಆರಿಸುವ ವಿಧಾನ ಬದಲಿಸಿ, ಇದನ್ನು ಸಾಧಿಸುವ ಸಾಮರ್ಥ್ಯವುಳ್ಳವರನ್ನೇ ಯಕ್ಷಗಾನ ಅಕಾಡೆಮಿಯ ಸದಸ್ಯರನ್ನಾಗಿ ಆಯ್ಕೆ ಮಾಡಿದರೆ ಈ ಕೆಲಸವು ಸುಲಭವಾದೀತೇನೋ? ಸರಕಾರದ ಅಧೀನದಲ್ಲಿ ಇರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶಾಲವಾದ ಕಾರ್ಯವ್ಯಾಪ್ತಿ ಹಾಗೂ ಹೆಚ್ಚಿನ ಅನುದಾನ ಹೊಂದಿರುವ ಕಾರಣ ಈ ಇಲಾಖೆಗೆ ಯಕ್ಷಗಾನ ಕಲಾವಿದರ ಹಿತವನ್ನು ರಕ್ಷಿಸುವ ಹೊಣೆಗಾರಿಕೆ ನೀಡಬಹುದು. ಪ್ರಸ್ತುತ ಈಗಿನ ಕಾಲಘಟ್ಟದಲ್ಲಿ ಯಕ್ಷಗಾನ ಕಲಾವಿದರ ಸಂಕಷ್ಟದ ಕಾಲದಲ್ಲಿ ನೆರವಾಗುವವರು ಯಕ್ಷಗಾನ ಅಭಿಮಾನಿಗಳು, ಕೆಲವೊಂದು ಸಂಘ ಸಂಘಟನೆಗಳು ಮಾತ್ರ. ಉಡುಪಿಯ " ಯಕ್ಷಗಾನ ಕಲಾರಂಗ " ವು ತುಂಬಾ ವರ್ಷಗಳಿಂದ ಯಕ್ಷಗಾನ ಕಲಾವಿದರ ಹಿತಕ್ಕಾಗಿ ಕೆಲಸ ಮಾಡುತ್ತಿದೆ. ಕಲಾವಿದರಿಗೆ ಪ್ರಶಸ್ತಿ ನೀಡಿಕೆ, ವಸತಿ ನಿರ್ಮಾಣ, ಕಲಾವಿದರ ಮಕ್ಕಳಿಗೆ ವಿದ್ಯಾರ್ಥಿ ವೇತನ, ಅಸೌಖ್ಯಕ್ಕೊಳಗಾದ, ನಿಧನರಾದ ಕಲಾವಿದರ ಕುಟುಂಬಕ್ಕೆ ಧನಸಹಾಯ ಇತ್ಯಾದಿ ನೀಡಿ ಕಲಾವಿದರ ನೆರವಿಗೆ ಧಾವಿಸುತ್ತಿದೆ. ಯಕ್ಷಗಾನ ಕಲಾವಿದರಿಗಾಗಿ ಸ್ಪಂದಿಸುವ ಯಕ್ಷಗಾನ ಕಲಾರಂಗದ ಸಾಧನೆ ಶ್ಲಾಘನೀಯ – ಮುಂದುವರೆಯುವುದು.. .. .. ..



ಎಂ ಶಾಂತಾರಾಮ ಕುಡ್ವ

## ಮುಂಬೈನಲ್ಲಿ ಯಕ್ಷಗಾನದ ಕವಲು

ವಲಸೆ ಎನ್ನುವುದು ಮನುಷ್ಯನ ಜೀವನದಲ್ಲಿ ಹಾಸುಹೊಕ್ಕಾಗಿ ಬಂದಿದೆ. ತಾನು ಬೆಳೆಯಬೇಕು ಅಥವಾ ಜೀವನದ ಅಗತ್ಯಗಳನ್ನು ಪೂರೈಸಿಕೊಳ್ಳುವ ಹಂಬಲದಿಂದ ಮನುಷ್ಯ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆಯನ್ನು ಮಾಡಿ ಅಲ್ಲಿ ತನ್ನ ಚಟುವಟಿಕೆಗಳನ್ನು ಮುಂದುವರೆಸುತ್ತಾನೆ. ತಾನು ಹೊಸ ಪ್ರದೇಶದಲ್ಲಿ ನೆಲೆಸಿದ್ದರೂ ಕೂಡ ಹಿಂದಿನ ಪ್ರದೇಶದ ಸಾಂಸ್ಕೃತಿಕತೆಯನ್ನು, ತನ್ನ ಆಚಾರ–ವಿಚಾರಗಳನ್ನು ಬಿಡಲು ಸಾಧ್ಯವಾಗದೇ ಹೆಚ್ಚಿನ ಸಂದರ್ಭಗಳಲ್ಲಿ ಮುಂದುವರಿಸಿಕೊಂಡು ಹೋಗುತ್ತಾನೆ. ಈ ಮೂಲಕವಾಗಿ ಹೊಸ ಪ್ರದೇಶದಲ್ಲಿ ಜನ್ಮಜಾತವಾಗಿ ಬಂದಿರುವ ಸಂಸ್ಕೃತಿಯನ್ನು ಪಸರಿಸುವುದಕ್ಕೆ ಯತ್ನಿಸುತ್ತಾನೆ. ಈ ವಿಚಾರಗಳು ಕಲೆಗಳಿಗೂ ಅನ್ವಯವಾಗುತ್ತದೆ. ಕರ್ನಾಟಕದ ಕರಾವಳಿ ಮತ್ತು ಮಲೆನಾಡಿನಲ್ಲಿ ಹೆಚ್ಚಾಗಿ ಕಾಣಸಿಗುವ ಪಡುವಲಪಾಯದ ಯಕ್ಷಗಾನ ಕಲೆ ಇತ್ತೀಚಿನ ವರುಷಗಳಲ್ಲಿ ದೇಶದ ಮಹಾನಗರಗಳಲ್ಲಿ ಗಾಢವಾಗಿ ವ್ಯಾಪಿಸುತ್ತಿರುವುದನ್ನು ಈ ನಿಟ್ಟಿನಲ್ಲಿ ಗುರುತಿಸಬಹುದಾಗಿದೆ.

ಇಂತಹ ಪ್ರಯತ್ನದಲ್ಲಿ ಬೆಂಗಳೂರು, ಮೈಸೂರು, ತುಮಕೂರು, ಅಮೇರಿಕಾ, ದುಬೈ ಇತ್ಯಾದಿ ಪ್ರದೇಶಗಳು ಈಗ ಯಕ್ಷಗಾನದ ತಾಣಗಳಾಗಿ, ಕ್ಷೇತ್ರಗಳಾಗಿ ಬದಲಾಗುತ್ತಿರುವುದನ್ನು ಕಾಣಬಹುದು. ಇಂತಹ ಪಟ್ಟಿಯಲ್ಲಿ ಮುಂಬೈ ಯಕ್ಷಗಾನಕ್ಕೆ ಪ್ರತ್ಯೇಕವಾದ ಸ್ಥಾನವಿದ್ದು ಯಕ್ಷಗಾನ ರಂಗಕ್ಕೆ ತನ್ನದೇಯಾದ ಕೊಡುಗೆಗಳನ್ನು ನೀಡುತ್ತಿದೆ. ಮಹಾರಾಷ್ಟ್ರಕ್ಕೆ ಹಾಗೂ ನಮ್ಮ ಕರ್ನಾಟಕದ ಕಲೆಯಾದ ಯಕ್ಷಗಾನಕ್ಕೆ ಶತಮಾನಗಳ ಅವಿನಾಭಾವ ಸಂಬಂಧವಿದೆ. ಎರಡು ಶತಮಾನಗಳ ಹಿಂದೆ ಉತ್ತರಕನ್ನಡ ಜಿಲ್ಲೆಯ ಕರ್ಕಿ ಮೇಳವು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಯಕ್ಷಗಾನ ಪ್ರದರ್ಶನವನ್ನು ಮಾಡಿ, ಅಲ್ಲಿ ಮರಾಠಿ ರಂಗಭೂಮಿಯ ಉದಯಕ್ಕೆ ಕಾರಣವಾಗಿರುವುದನ್ನು ಇತಿಹಾಸದ ಪುಟಗಳಲ್ಲಿ ಗಮನಿಸಬಹುದಾಗಿದೆ. ಮಹಾರಾಷ್ಟ್ರದ ರಾಜಧಾನಿಯಾಗಿರುವ ಮುಂಬೈನಲ್ಲಿ ಯಕ್ಷಗಾನವು ಪ್ರದರ್ಶನವಾಗುತ್ತಿರುವುದು ಕೂಡ ಇಂದು ನಿನ್ನೆಯದಲ್ಲ. ಶತಮಾನಗಳ ಹಿಂದೆ ಅಂದರೆ 1884ರಲ್ಲಿ ಮುಂಬೈನಲ್ಲಿ ಯಕ್ಷಗಾನ ಪ್ರದರ್ಶನ ಕಂಡಿರುವ ಬಗ್ಗೆ ಆ ಕಾಲದಲ್ಲಿ ಪತ್ರಿಕೆಯಲ್ಲಿ ವರದಿ ಬಂದಿತ್ತು. ಇಂತಹ ಇತಿಹಾಸವನ್ನು ಹೊಂದಿರುವ ಮುಂಬೈ ಯಕ್ಷಗಾನವು ಇಂದು ಯಕ್ಷಗಾನ ಕ್ಷೇತ್ರದ ಆವಾಸ ಸ್ಥಾನಗಳಲ್ಲಿ ಒಂದಾಗಿದೆ. ದೇಶದ ಆರ್ಥಿಕ ನಗರವಾಗಿರುವ



ರವಿ ಮಡೋಡಿ

ಮುಂಬೈ ತನ್ನೊಳಗೆ ಸಾಂಸ್ಕೃತಿಕ ಬೇರುಗಳನ್ನು ಹರವುಗೊಳಿಸಿರುವುದರಲ್ಲಿ ಯಕ್ಷಗಾನದ ಪಾತ್ರವೂ ಇದೆ. ಇಂತಹ ಬಹುಭಾಷೆಯ ಬಹುಸಂಸ್ಕೃತಿಯ ಪ್ರದೇಶದಲ್ಲಿ ಸ್ತ್ರೀ-ಪುರುಷ, ತೆಂಕು-ಬಡಗು ಎಂಬ ಯಾವ ಪರಿಭೇದವಿಲ್ಲದೆ ಯಕ್ಷಗಾನವೆಂಬ ಸತ್ವ-ತತ್ವ ಎಲ್ಲರನ್ನು ಸೇರಿಸುವ, ಮನಸ್ಸುಗಳನ್ನು ಒಂದಾಗಿಸುವ ಮಾಧ್ಯಮವಾಗಿ ರೂಪುಗೊಳ್ಳುತ್ತಿರುವುದು ವಿಶೇಷವಾಗಿದೆ. ಮುಂಬೈಯ ಯಕ್ಷಗಾನವು ಎರಡು ವಿಭಾಗದಲ್ಲಿ ಯಕ್ಷಗಾನವನ್ನು ಬೆಳೆಸುವಲ್ಲಿ ನಿರತವಾಗಿದೆ. ಬೇಸಿಗೆಯ ಮೇಳಗಳ ತಿರುಗಾಟ ಮುಗಿದ ಮೇಲೆ ಮಳೆಗಾಲದಲ್ಲಿ ಮಳೆಯ ಕಾರಣದಿಂದಾಗಿ ಊರಿನಲ್ಲಿ ಪ್ರದರ್ಶನ ಮಾಡಲು ಸಾಧ್ಯವಾಗುವುದಿಲ್ಲ(ಮೇಳಗಳ ಆಟಗಳು ಹೆಚ್ಚಾಗಿ ಬಯಲಿನಲ್ಲಿ ಆಗುವ ಕಾರಣಕ್ಕಾಗಿ. ಮಳೆಗಾಲದಲ್ಲಿ ಕೆಲವು ಆಟಗಳು ರಂಗಮಂದಿರಗಳಲ್ಲಿ ಸಂಪನ್ನವಾಗುವುದಿದೆ). ಆಗ ಮೇಳಗಳು/ ಕಲಾವಿದರು ತಮ್ಮ ತಂಡವನ್ನು ಕಟ್ಟಿಕೊಂಡು ಮುಂಬೈಗೆ ಬಂದು ಪ್ರದರ್ಶನಗಳನ್ನು ಮಾಡುತ್ತಾರೆ. ಅಂತಹ ಪ್ರದರ್ಶನಗಳಿಗೆ ಮುಂಬೈಯ ಯಕ್ಷಗಾನ ಪ್ರೇಮಿಗಳು ಹಲವು ದಶಕಗಳಿಂದ ದೊಡ್ಡ ಮಟ್ಟದಲ್ಲಿ ಪ್ರೋತ್ಸಾಹವನ್ನು ನೀಡುತ್ತ ಬಂದಿರುವುದು ಮೇಳ/ಕಲಾವಿದರ ಬದುಕಿಗೆ ವರದಾನವಾಗಿದೆ. ವೃತ್ತಿಪರ ಮೇಳಗಳು ಕಲಾವಿದರಿಗೆ ಬೆಂಬಲವನ್ನು ನೀಡುವುದು ಒಂದು ಬಗೆಯಾದರೆ ಮತ್ತೊಂದು ಬಗೆಯಲ್ಲಿ ತಾವೇ ಯಕ್ಷಗಾನವನ್ನು ಕಲಿತು, ಸಂಘ ಸಂಸ್ಥೆಗಳನ್ನು ಕಟ್ಟಿ ಸ್ಥಳೀಯವಾದ ಯಕ್ಷಗಾನ ಪ್ರದರ್ಶನಗಳನ್ನು ಮಾಡುತ್ತಿರುವುದು ಕಲಾಪ್ರೇಮವನ್ನು ಎತ್ತಿಹಿಡಿಯುತ್ತಿದೆ. ಹೊಸ ತಲೆಮಾರಿನವರಿಗೆ ಯಕ್ಷಗಾನವನ್ನು ಪರಿಚಯಿಸುವ ಕಾರ್ಯವನ್ನು ಮಾಡುತ್ತ, ಕಲೋಪಾಸನೆಯಲ್ಲಿ ತೊಡಗಿರುವುದು ಭವಿಷ್ಯದ ಯಕ್ಷಗಾನದ ದೃಷ್ಟಿಯಲ್ಲಿ ಅತ್ಯಂತ ಮಹತ್ವದ್ದಾಗಿದೆ. ಇಂದು 150ಕ್ಕೂ ಹೆಚ್ಚು ಸಂಘ-ಸಂಸ್ಥೆಗಳು ಮುಂಬೈ ಯಕ್ಷಗಾನದ ಭಾಗವಾಗಿ ಕಲಾ ತುಡಿತದಲ್ಲಿ ಭಾಗಿಯಾಗುತ್ತಿರುವುದು ಸಣ್ಣ ಸಾಧನೆಯೇನಲ್ಲ. ಮುಂಬೈಯಲ್ಲಿ ಇದ್ದುಕೊಂಡು ಯಕ್ಷಗಾನವನ್ನು ಕಟ್ಟುವ ಹಾಗೂ ಬೆಳೆಸುವ ಕೈಂಕರ್ಯ ಸದ್ದಿಲ್ಲದೇ ಹಲವು ದಶಕಗಳಿಂದ ಹಲವು ಮಹನೀಯರಿಂದ ಸಂಪನ್ನವಾಗುತ್ತಿದೆ. ಇದರಲ್ಲಿ ಹೆಚ್. ಬಿ.ಎಲ್ ರಾಯರ ಕಾಯಕಗಳು ಮಹತ್ವಪೂರ್ಣವೆನಿಸಿ ಎಲ್ಲರಿಗೂ ಮಾದರಿಯಾಗಿದೆ. ಅವರು ಸಂಘಟಿಸಿದ ಹದಿನೈದು ಅಖಿಲ ಭಾರತ ಮಟ್ಟದ ಯಕ್ಷಗಾನ ಸಮ್ಮೇಳನಗಳು ಯಕ್ಷಗಾನದ ಆಶಯಗಳನ್ನು ಕಟ್ಟುವ ಭೂಮಿಕೆಗಳಾಗಿವೆ. ಅಷ್ಟೇಯಲ್ಲದೇ ಪದವೀಧರ ಸಂಸ್ಥೆಯಿಂದ ಹೊರತಂದ ನೂರಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗ ಪುಸ್ತಕಗಳು, ಯಕ್ಷಗಾನ ಪ್ರದರ್ಶನಕ್ಕೆ ಆಧಾರವಾದ ಪ್ರಸಂಗಗಳ ಸಂರಕ್ಷಣೆಯಲ್ಲಿ ಬಹಳ ಮುಖ್ಯವಾದ ಕಾರ್ಯವೆನಿಸಿದೆ. ಯಕ್ಷಗಾನದ ದಾಖಲೀಕರಣ, ಪುಸ್ತಕ ಪ್ರಕಟಣೆ, ವಿಚಾರಸಂಕಿರಣಗಳು, ಕಾರ್ಯಾಗಾರಗಳು ಹೀಗೆ




ಸಾಂದರ್ಭಿಕ ಚಿತ್ರ

ಯಕ್ಷಗಾನಕ್ಕೆ ಅಗತ್ಯವೆನಿಸಿದ ಅಕಾಡೆಮಿಕ್ ವಿಷಯಗಳನ್ನು ಸಕಾಲದಲ್ಲಿ ಆಯೋಜಿಸಿ, ಯಕ್ಷಗಾನ ಸಾಹಿತ್ಯ ಮತ್ತು ವಿಮರ್ಶಾ ಮಾಧ್ಯಮದ ಬೆಳವಣಿಗೆಗೆ ಚಾರಿತ್ರಿಕ ಕಾರ್ಯಗಳು ನಡೆದಿವೆ. ಇತ್ತೀಚೆಗಷ್ಟೇ ಮಧುಸೂದನ್ ರಾವ್ ಅವರು 'ಮುಂಬೈ ಯಕ್ಷಗಾನ ರಂಗಭೂಮಿ' ಎಂಬ ಮಹಾಪ್ರಬಂಧವನ್ನು ಮಂಡಿಸಿ ,ಮುಂಬೈ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿಗೆ ಭಾಜನರಾಗಿರುವುದು ಮುಂಬೈ ಯಕ್ಷಗಾನದ ವಿಶ್ವವಿರಾಟ ಸ್ವರೂಪವನ್ನು ತಿಳಿಸಿಕೊಡುತ್ತದೆ. ಕನ್ನಡದ ಯಕ್ಷಗಾನವು ಹಲವು ಭಾಷೆಗಳಲ್ಲಿ ಪ್ರಯೋಗವಾಗಿರುವುದನ್ನು ನಾವೆಲ್ಲ ಕಂಡಿದ್ದೇವೆ. ಕೊಂಕಣಿ, ತುಳು, ಹಿಂದಿ, ಇಂಗ್ಲಿಷ್, ಸಂಸ್ಕೃತ ಹೀಗೆ ಬೇರೆ ಬೇರೆ ಭಾಷೆಗಳಲ್ಲಿ ಪ್ರದರ್ಶನವನ್ನು ಮಾಡಿ ಯಕ್ಷಗಾನವನ್ನು ಬೆಳೆಸುವ ಯತ್ನ ಹಲವು ದಶಕದಿಂದ ನಡೆಯುತ್ತ ಬಂದಿದೆ. ಇತ್ತೀಚಿಗೆ ಮುಂಬೈನ ಎಮ್.ಟಿ. ಪೂಜಾರಿಯವರು ಮರಾಠಿಯಲ್ಲಿಯೇ ಯಕ್ಷಗಾನ ಪ್ರಸಂಗವನ್ನು ರಚಿಸಿ, ಮುಂಬೈನ ಸ್ಥಳೀಯ ಮರಾಠಿ ಕಲಾವಿದರು ಅವರ ಭಾಷೆಯಲ್ಲಿ ಪ್ರದರ್ಶನವನ್ನು ಮಾಡುತ್ತಿರುವುದು ವಿಶೇಷವಾಗಿದೆ. ಈಗಾಗಲೇ 30ಕ್ಕೂ ಹೆಚ್ಚು ಯಶಸ್ವಿ ಪ್ರಯೋಗಗಳು ನಡೆದಿದ್ದು ಕಲೆಗೆ ಭಾಷೆ, ಪ್ರದೇಶದ ಹಂಗಿಲ್ಲವೆನ್ನುವುದನ್ನು ತೋರಿಸಿಕೊಡುತ್ತಿದೆ. ಇದರ ಜೊತೆಗೆ ಅನೇಕ ಮುಂಬೈಯ ಪ್ರಸಂಗಕರ್ತರ ಪ್ರಸಂಗಗಳು ವೃತ್ತಿಪರ ಮೇಳಗಳಲ್ಲಿ ಪ್ರಯೋಗವಾಗುತ್ತಿರುವುದು ಸಹ ಗಮನಾರ್ಹವಾದ ಸಂಗತಿಯಾಗಿದೆ. ಯಕ್ಷಗಾನದ ಮೂಲ ಸ್ವರೂಪಕ್ಕೆ ಧಕ್ಕೆ ಉಂಟಾಗದಂತೆ ತಡೆಯುವ ಯಕ್ಷಗಾನ ಸಂರಕ್ಷಣಾ ಸಮಿತಿಗಳು ಮುಂಬೈನಲ್ಲಿ ನೆಲೆಸಿ ಯಕ್ಷಗಾನದ ಉಳಿವಿಗಾಗಿ ನಿತ್ಯ ಕಾಯಕವನ್ನು ಮಾಡುತ್ತಿವೆ. ಹಲವು ದಶಕಗಳಿಂದ ಮುಂಬೈ ಯಕ್ಷಗಾನವು ಹೆಮ್ಮರವಾಗಿ ಬೆಳೆದು ನಿಂತಿದೆ. ಮುಂಬೈ ಯಕ್ಷಗಾನವು ಅಸ್ತಿತ್ವದ ಪರಿಧಿಯನ್ನು ಮೀರಿ ಸ್ರೋತವಾಗಿ ಬೆಳೆಯುವುದಕ್ಕೆ ಕನ್ನಡ-ತುಳು ಭಾಷಿಕರ ಅಂತಃಶಕ್ತಿ ಕಾರಣವೆಂದು ಗಟ್ಟಿಯಾಗಿ ಹೇಳಬಹುದು. ಊರಿನಿಂದ ತಮ್ಮ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಈ ಮಹಾನಗರಕ್ಕೆ ಬಂದವರು ತಮ್ಮೊಂದಿಗೆ ಯಕ್ಷಗಾನವೆಂಬ ಅಭಿಮಾನ/ಪ್ರೀತಿಯನ್ನು ಕಟ್ಟಿ ತಂದರು. ತಮ್ಮ ಬದುಕಿನ ಧಾವಂತ, ಜಂಜಾಟದ ನಡುವೆ ಕಲೆಯ ಬಗೆಗಿನ ಮಿಡಿತ ಸೊರಗಲಿಲ್ಲ. ತಮ್ಮ ಬದುಕಿನ ಜೊತೆಯಲ್ಲಿ ತವರು ಕಲೆಯ ಅಭಿಯಾನದ ಕೈಂಕರ್ಯವನ್ನು ಮಾಡಿದವರು. ಕೇವಲ ಅದು ಕಲೆ ನೆನಪಿನ ಬುತ್ತಿಯಾಗದೇ ನಿತ್ಯ ಮೆಲ್ಲುವ ಮೃಷ್ಟಾನ್ನದಂತೆ ಬೆಳೆಸಿದರು. ನಿರಂತರತೆಯನ್ನು ಕಾಯ್ದುಕೊಂಡು ಕಲಾ ಸಂಬಂಧಿ ಚಟುವಟಿಕೆಗಳನ್ನು ನಡೆಸುತ್ತ ಬಂದರು. ನಿತ್ಯವೂ ಸಾವಿರಾರು ಮನಸ್ಸುಗಳನ್ನು ಕಲೆಹಾಕಿ ಯಕ್ಷಗಾನವೆಂಬ ಕಲೆಯ ಸಿಹಿಯನ್ನು ನಗರವಾಸಿಗಳಿಗೆ ಹಂಚುತ್ತಿದ್ದಾರೆ. ಇಂತಹ ಸಾಂಸ್ಕೃತಿಕ ಸಲ್ಲಾಪವನ್ನು ಬೆಳೆಸುವಲ್ಲಿ ಅವರ ತವರಿನ ಸಂಸ್ಕೃತಿಯ ಬಗೆಗಿನ ಅನನ್ಯ ಪ್ರೀತಿಯೆಂದು ವ್ಯಾಖ್ಯಾನಿಸಬಹುದು. ತಾವೇ ಕಲಿತರು, ಕಲಿಸಿದರು, ಬೆಳೆದರು, ಬೆಳೆಸಿದರು. ಕರ್ನಾಟಕದ ಕರಾವಳಿಯಲ್ಲಿ ಯಕ್ಷಗಾನದ ಬೆಳವಣಿಗೆಗೆ ದೊಡ್ಡ ಮಟ್ಟದಲ್ಲಿ ದೇವಸ್ಥಾನಗಳು, ಮಠ ಮಂದಿರಗಳು, ಪೋಷಕ ಸ್ಥಾನದಲ್ಲಿ ನಿಂತು ಕಾರ್ಯನಿರ್ವಹಿಸುತ್ತಿವೆ. ಅದರ ಹೊರಗೆ ಇಂತಹ ಅವಕಾಶಗಳು ಕಡಿಮೆ. ಆದರೆ ಮುಂಬೈ ನಗರದಲ್ಲಿ ಕಲಾಭಿಮಾನಿಗಳು ಬಹು ಸಂಖ್ಯೆಯಲ್ಲಿದ್ದು ತನು-ಮನ-ಧನದಿಂದ ಸಮರ್ಪಿಸಿಕೊಂಡು, ರಾಜಾಶ್ರಯವಿಲ್ಲದೇಯೂ ಕೂಡ ಕಲೆಯನ್ನು ಬೆಳೆಸುತ್ತಿದ್ದಾರೆ. ವಡವನ್ನು

ಈ ಧೋರಣೆಗಳು ಉಳಿದ ಕಲೆಗಳಿಗೂ ಮಾದರಿಯೆನಿಸುತ್ತವೆ. ಇಂದು ಕನ್ನಡದ ಅಸ್ಮಿತೆಯ ಬಗ್ಗೆ ದೊಡ್ಡ ಮಟ್ಟದಲ್ಲಿ ಚರ್ಚೆಗಳಾಗುತ್ತಿವೆ. ಕನ್ನಡವನ್ನು ಉಳಿಸಿ ಬೆಳೆಸುವ ಸುಲಭೋಪಾಯಗಳಲ್ಲಿ ಯಕ್ಷಗಾನ ರಾಜಮಾರ್ಗದಂತೆ ಕಾಣಿಸುತ್ತದೆ. ಯಕ್ಷಗಾನ ಬೆಳೆಯುವುದರಿಂದ ಪರೋಕ್ಷವಾಗಿ ಕನ್ನಡವನ್ನು ಬೆಳೆಸಿದಂತಾಗುವುದು ಸುಳ್ಳಲ್ಲ. ಮುಂಬೈಯಂತಹ ನಗರದಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಓದುವ ಹೊಸ ತಲೆಮಾರಿನ ಮಕ್ಕಳು ಯಕ್ಷಗಾನವನ್ನು ಕಲಿಯುವುದರ ಜೊತೆ ಜೊತೆಯಲ್ಲಿ ಕನ್ನಡವನ್ನು ಕಲಿಯುತ್ತಿರುವುದು ಸಂತಸದ ವಿಚಾರವಾಗಿದೆ. ಭಾಷಾ ಪ್ರೇಮದ ಸಂವರ್ಧನೆ ಮತ್ತು ಉಳಿವಿಗೆ ಯಕ್ಷಗಾನ ಒಂದು ಭೂಮಿಕೆಯಾಗಿ ಪಲ್ಲವಿಸಿ ಕನ್ನಡವನ್ನು ಅಧಿಕ್ಷಿತವಾಗಿ ಬೆಳೆಸುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಇದು ತೋರಿಸಿಕೊಡುತ್ತಿದೆ. ಆಧುನಿಕತೆಯ ಪರಾಕಾಷ್ಠೆಯ ನಡುವೆ ನಮ್ಮ ಹಿಂದಿನ ಕಲೆ–ಸಾಂಸ್ಕೃತಿಕ ನೆಲೆಗಟ್ಟುಗಳು ಶಿಥಿಲವಾದಂತೆ ಕಂಡರೂ ಕೂಡ ಅದು ಅಳಿದಿಲ್ಲ ಎನ್ನುವುದು ವಾಸ್ತವ. ನಮ್ಮ ಕಲೆಗಳ ಹಿಂದಿನ ವೈಭವಗಳನ್ನು ಇಂದು ಕಾಣಲು ಸಾಧ್ಯವಾಗದಿದ್ದರೂ ಕಲೆಯನ್ನು ಪೋಷಿಸುವ ಬೆಳೆಸುವ ಮನಸ್ಸುಗಳು ಈಗಲೂ ಹಪಹಪಿಸುತ್ತಿರುವುದು ಒಳ್ಳೆಯ ಬೆಳವಣಿಗೆ. ಆದರೆ ಯಕ್ಷಗಾನ ವಲಯದಿಂದ ತನ್ನ ಹೊರಗೆ ನಡೆಯುವ ಯಕ್ಷಗಾನದ ಕಾರ್ಯ ಕಲಾಪಗಳನ್ನು ಅಷ್ಟೊಂದು ಗಂಭೀರವಾಗಿ ಸ್ವೀಕರಿಸಿದಂತೆ ಕಾಣಿಸುವುದಿಲ್ಲ. ಪ್ರದೇಶಗಳ ಆಧಾರದಲ್ಲಿ ಕೆಲವೊಮ್ಮೆ ಗುರುತಿಸುವಿಕೆ, ಮನ್ನಣೆ ಗೌರವಗಳು ನಿರ್ಧಾರವಾಗಿ ಬಿಡುತ್ತವೆ. ಈ ತರದ ಮಡಿವಂತಿಕೆ ಅಥವಾ ಕೀಳರಿಮೆಯ ಪ್ರವೃತ್ತಿಗಳು ಯಕ್ಷಗಾನದ ವಿಸ್ತಾರವನ್ನು ಕುಂಠಿತಗೊಳಿಸುವುದು ಸುಳ್ಳಲ್ಲ. ಯಕ್ಷಗಾನವು ಬೆಳವಣಿಗೆ ಹೊಂದಬೇಕಾದರೆ ಎಲ್ಲರ ಯತ್ನದ ಅಗತ್ಯವಿದೆ. ಎಲ್ಲರೂ ಒಟ್ಟಾಗಿ ಹೋಗುವ ಅನಿವಾರ್ಯತೆಯಿದೆ. ಈ ನಿಟ್ಟಿನಲ್ಲಿ ಪ್ರದೇಶಗಳು ಬೇರೆ ಬೇರೆಯಾದರೂ ಯಕ್ಷಗಾನ ಎಂಬ ಏಕಸೂತ್ರವನ್ನು ಅಳವಡಿಸಿಕೊಳ್ಳಬೇಕಿದೆ. ಮುಂಬೈಯಂತಹ ವಲಯದಲ್ಲಿ ಇಂತಹ ಕಲಾ ಪ್ರಯತ್ನಗಳು ನಡೆಯುತ್ತಿರುವಾಗ, ಅವರಿಗೆ ದೊಡ್ಡ ಬೆಂಬಲವನ್ನು ನೀಡಿದರೆ ಭವಿಷ್ಯದ ಯಕ್ಷಗಾನದ ಹಿತದೃಷ್ಟಿಯಿಂದ ಒಳ್ಳೆದು.

## ಅನನ್ಯ ಪಾತ್ರ ಪರಂಪರೆಯ ಮಲ್ಲ – ಜಲವಳ್ಳಿ

ಯಕ್ಷಗಾನ ವಲಯದಲ್ಲಿ ಯಾವುದೇ ಒಂದು ಶೈಲಿಗೆ ಅಂಟಿಕೊಳ್ಳದೇ ತನ್ನದೇ ಆದ ಹೊಸ ಶೈಲಿಯನ್ನು ಬಡಗುತಿಟ್ಟಿಗೆ ನೀಡಿದ ಗತ ಶತಮಾನದ ಮೇರು ಕಲಾವಿದ



ಪ್ರೊ ಎಸ್ ವಿ ಉದಯ್ ಕುಮಾರ್ ಶೆಟ್ಟಿ

ಎಂಬುದನ್ನು ಜಲವಳ್ಳಿ ವೆಂಕಟೇಶ ರಾವ್ ಎನ್ನುವುದರಲ್ಲಿ ಮರು ಮಾತಿಲ್ಲ. ನಾಲ್ಕು ಸುತ್ತು – ಒಂದು ಗತ್ತು ಎಂಬಂತೆ ಯಾವುದೇ ವಿಕಾರತೆಯ ನೃತ್ಯವಿಲ್ಲದೆ ತನ್ನ ವಿಶಾಲವಾದ ಹಣೆ ಮತ್ತು ಕಣ್ಣುಗಳ ಮೂಲಕ ಭಾವನೆಗಳನ್ನು ಹೊಮ್ಮಿಸುವ ಅವರ ಪ್ರತಿಭೆಗೆ ಅವರೇ ಸಾಟಿ. ಎದುರಾಳಿಯ ಆರ್ದ್ರ ಶಕ್ತಿಯನ್ನು ಸೆಳೆಯುವ ಶಕ್ತಿ ಅವರ ವೇಷಗಳಿಗೆ ಸಿದ್ಧಿಸಿವೆ. ಹಾಗಾಗಿ ರಂಗದಲ್ಲಿ ಅದುವರೆಗೆ ಕಾಣಿಸಿಕೊಂಡು ಪ್ರೇಕ್ಷಕರ ಚಪ್ಪಾಳೆಗೆ ಕಾರಣೀಭೂತವಾಗಿರುವ ಇತರರ ಪಾತ್ರಗಳು ಜಲವಳ್ಳಿಯವರ ಪ್ರವೇಶದ ನಂತರ ರಂಗದಲ್ಲಿ ಕಾಣಿಸಿಕೊಳ್ಳದಿರುವುದು ಅನೇಕ ಸಂದರ್ಭದಲ್ಲಿ ವ್ಯಕ್ತವಾದ ಸತ್ಯ. ಹಾಗಾಗಿ ಅವರ ಪ್ರವೇಶದ ನಂತರ ಪ್ರೇಕ್ಷಕರ ದೃಷ್ಟಿ ಆ ಕಡೆಗೆ ಸೆಳೆಯಬಲ್ಲ ವಿಶೇಷ ಶಕ್ತಿ ಅವರ ಪಾತ್ರಗಳಿಗಿವೆ. ಅದು ಸಾಲಿಗ್ರಾಮ ಮೇಳದಲ್ಲಿ ಲೀಲಾಮೂರ್ತಿ ಶ್ರೀ ಕೃಷ್ಣ ಆಖ್ಯಾನದ ಮೆರವಣಿಗೆ ಕಂಸನಿರಲಿ, ವಧಾ ಕಂಸನಿರಲಿ, ಅವರ ವೃತ್ತಿ ಜೀವನದ ಬಹು ಪ್ರಸಿದ್ಧ ಪಾತ್ರ ಶನೀಶ್ವರನಿರಲಿ, ಅವರ ಸಮಕಾಲೀನ ಕಲಾವಿದ ಚಿಟ್ಟಾಣಿಯವರೊಂದಿಗಿನ ಜೋಡಿವೇಷಗಳಾದ ಚಿಟ್ಟಾಣಿಯವರ ಗದಾಯುದ್ಧದ ಕೌರವನಿಗೆ ಭೀಮನಿರಲಿ, ಕೀಚಕನಿಗೆ ವಲಲನಿರಲಿ, ರುದ್ರಕೋಪನಿಗೆ ರಕ್ತಜಂಘ, ಭಸ್ಮಾಸುರನಿಗೆ ಈಶ್ವರ, ಈಶ್ವರನಿಗೆ ಮಹೋಗ್ರ ಇವೆಲ್ಲ ಈ ಮಹಾನ್ ಕಲಾವಿದರ ವೃತ್ತಿ ಜೀವನದಲ್ಲಿ ದಾಖಲಾಗಿದೆ. ಮಾತ್ರವಲ್ಲ ಮುಂದೆ ಇಂತಹ ಅದ್ಭುತ ಜೋಡಿಯನ್ನು ನಿರೀಕ್ಷಿಸುವುದೂ ಕಷ್ಟಸಾಧ್ಯ. ಒಬ್ಬರು ಯಕ್ಷಗಾನದ ನೃತ್ಯಕ್ಕೆ ವಿಶೇಷ ಗೌರವ ನೀಡಿದರೆ ಇನ್ನೊಬ್ಬರದ್ದು ಭಾವ ತುಂಬಿದ ಅಭಿನಯ, ಗತ್ತು ಮತ್ತು ಗಾಂಭೀರ್ಯದ ನಡೆಯಿಂದ ರಂಗಸ್ಥಳವನ್ನು ತುಂಬುತಿತ್ತು. ನಾನು ಬಹಳ ಸಾರಿ ನೋಡಿದ, ಮೆಚ್ಚಿಕೊಂಡ ಮತ್ತು ಮುಂದೆ ಅದೇ ಪಾತ್ರವನ್ನು ಆ ರೀತಿ ಅಥವಾ ಅದಕ್ಕಿಂತ ಉತ್ತಮವಾಗಿ ಪ್ರದರ್ಶಿಸಲು ಬೇರೆ ಯಾವ ಕಲಾವಿದರಿಂದಲೂ ಸಾಧ್ಯವಾಗಿಲ್ಲ ಎನ್ನುವುದನ್ನು ಹೇಳಬಲ್ಲೆ. ಸುಮಾರು ಎಂಬತ್ತರ ದಶಕದಲ್ಲಿ ಸಾಲಿಗ್ರಾಮ ಮೇಳದಲ್ಲಿ ಜಯಭೇರಿ ಪಡೆದ ಇಂದಿಗೂ ಚಿರನೂತನವಾಗಿರುವ ಎರಡು ಸಾಮಾಜಿಕ ಪ್ರಸಂಗಗಳ ಜಲವಳ್ಳಿಯವರಿಗೆ ಹೆಸರು ತಂದಿತ್ತ ಎರಡು ಪಾತ್ರಗಳನ್ನು ಇಲ್ಲಿ ಗಮನಿಸಬಹುದು. ಸುಮಾರು ಎಪ್ಪತ್ತರ ದಶಕದಲ್ಲಿ ಶ್ರೀ ಸಾಲಿಗ್ರಾಮ ಮೇಳದಲ್ಲಿ ಡಾ/ವೈ ಚಂದ್ರಶೇಖರ ಶೆಟ್ಟರ ಪೌರಾಣಿಕ ಪ್ರಸಂಗ ಇಡೀ ತಿರುಗಾಟದ ಅವಧಿಯಲ್ಲಿ ಪ್ರದರ್ಶನಗೊಂಡಿತ್ತು.ಅದರ ಸಂಪೂರ್ಣ ಯಶಸ್ಸಿಗೆ ಜಲವಳ್ಳಿಯವರ ಅಸಹಾಯಕ ಹೆಂಡತಿಯ ಗುಲಾಮನಂತೆ ವರ್ತಿಸುವ ನೀಲಧ್ವಜನ ಪಾತ್ರವೂ ಒಂದು. ಜೋಡಿ ವೇಷದಲ್ಲಿ ಜ್ವಾಲೆಯಾಗಿ ಅರಾಟೆ ಮಂಜುನಾಥ ಅವರು ಮನೋಜ್ಞ ಅಭಿನಯ ನೀಡುತ್ತಿದ್ದರು. ಶಿರಿಯಾರ ಮಂಜು ನಾಯ್ಕರ ಅರ್ಜುನ ಯಾಜಿಯವರ ಪ್ರವೀರ, ತೀರ್ಥಹಳ್ಳಿ ಗೋಪಾಲ ಆಚಾರ್ಯರ ಬಬ್ರುವಾಹನ ಐರೋಡಿಯವರ ಸಭೆಯ ಅರ್ಜುನ, ಮರವಂತೆ ನರಸಿಂಹದಾಸ ಮತ್ತು ನೆಲ್ಲೂರು ಮರಿಯಪ್ಪ ಆಚಾರ್ಯರ ಹಿಮ್ಮೇಳದಿಂದ ಪ್ರಸಂಗ ಇನ್ನಿಲ್ಲದ ಯಶಸ್ಸು ಕಂಡಿತು.ಇದರಿಂದ ಪ್ರೇರಣೆ ಎಂಬಂತೆ ನಾವಡರ ನಾಗಶ್ರೀ ಹಾಗೂ ಕಂದಾವರ ರಘುರಾಮ ಶೆಟ್ಟರ ಚೆಲುವೆ ಚಿತ್ರಾವತಿ ಪ್ರಸಂಗದಲ್ಲಿ ಹೆಂಡತಿಯ ಕೈಗೊಂಬೆ ಗಂಡ ಸುದರ್ಶನನಾಗಿ ಮತ್ತು ಸೊಸೆಯ ಚಾಡಿ ಮಾತನ್ನು ಸತ್ಯ ಎಂದು ನಂಬುವ ಮಾವ ಕೀರ್ತಿವರ್ಮನಾಗಿ ಜಲವಳ್ಳಿಯವರು ವಿಶಿಷ್ಟ ಅಭಿನಯ ನೀಡಿದ್ದಾರೆ. ಎರಡೂ ಪ್ರಸಂಗಗಳಲ್ಲಿ ಗಯ್ಯಾಳಿ ಹೆಂಡತಿ ಪ್ರಭಾಂಗಿ ಹಾಗೂ ಮತ್ಸರಿ ಸೊಸೆ ಮದನಾಂಗಿಯಾಗಿ ಅರಾಟೆಯವರೆ ಅಭಿನಯಿಸಿದ್ದರು ಎಂಬುದು ಗಮನಾರ್ಹ. ದುರಂತವೆಂದರೆ ಮುಂದೆ ಅನೇಕ ಬಾರಿ ಈ ಎರಡು ಪ್ರಸಂಗ ಪ್ರದರ್ಶನಗೊಂಡರೂ ಇಂತಹ ಜೋಡಿಯನ್ನು ಪ್ರೇಕ್ಷಕರಿಗೆ ನೋಡಲು ಸಾಧ್ಯವೇ ಆಗಿಲ್ಲ ಎನ್ನುವುದು ಸರ್ವರೂ ಒಪ್ಪಬಹುದಾದ ಸತ್ಯ.



ಜಲವಳಿ ವೆಂಕಟೇಶ ರಾವ್

**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ–9449686807 ನಮ್ಮ ವೆಬ್ ಸೈಟ್ ವಿಳಾಸ– nyt.1ngo.in - ಸಂಪಾದಕರು**

## ಧೀರಕಲೆಯೊಳಗೆ ಕೀರವಾಣಿಯರು – 02

### ಯಕ್ಷರಂಗದಲ್ಲಿ ಸ್ವರ ಹೊರಡಿಸಿದ ಮೊದಲ ಮಹಿಳಾ ಭಾಗವತರು – ದಿ. ನರ್ಮದಾ ಶಿಬರೂರಾಯ

'ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ, ಪೆಣ್ಣಲ್ಲವೆ ಪೊರೆದವಳು' ಎಂದು ಸಂಚಿಯ ಹೊನ್ನಮ್ಮ ಹದಿನಾರನೇ ಶತಮಾನದಲ್ಲೇ ಪ್ರಶ್ನಿಸಿದ್ದರೂ ಕೂಡ ಹೆಣ್ಣು ಹೊರ ಜಗತ್ತಿಗೆ ತೆರೆದುಕೊಳ್ಳುವುದು ಅಷ್ಟು ಸುಲಭಸಾಧ್ಯವಾಗಿರಲಿಲ್ಲ. ಆಕೆಗಿದ್ದ ಜವಾಬ್ದಾರಿಗಳ ಕಾರಣವೋ, ಸಾಮಾಜಿಕ ಸಮಸ್ಯೆಗಳೋ ಹೆಣ್ಣನ್ನು ಮನೆಗಷ್ಟೇ ಸೀಮಿತವಾಗಿರಿಸಿದ್ದವು. ಸಂಗೀತದಂತಹ ವಿದ್ಯೆಗಳನ್ನು ಕಲಿತರೂ ಅದು ಮನೆಯಲ್ಲಿ ಭಜನೆಗೋ, ಮಕ್ಕಳಿಗೆ ಕಲಿಸಿ, ಹಾಡಿಸುವುದಕ್ಕೋ ಅವಕಾಶವಿತ್ತಷ್ಟೇ. ಯಕ್ಷಗಾನ ರಂಗ ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಿಂದಾಗಿ ಅನೇಕರಿಗೆ ಸುಲಭದಲ್ಲಿ ಪರಿಚಿತವಾದರೂ ಹಿಂದೆ ಮನೆ–ಮನೆಗಳಲ್ಲಿನಡೆಯುತ್ತಿದ್ದಂತಹ ಕೂಟಗಳಿಂದ ಅಥವಾ ಆಟಗಳಿಂದಷ್ಟೇ ಪರಿಚಿತ. ಆದರೆ ಆ ಆಟ–ಕೂಟಗಳು ಅಂದಿನವರಲ್ಲಿ ಯಕ್ಷಗಾನ ಕಲೆಯ ಮೇಲೆ ಹುಟ್ಟಿಸಿದ ಆಸಕ್ತಿ ಮಾತ್ರ ಅದ್ಭುತ. ಆ ಆಸಕ್ತಿಗಳೇ ಯಕ್ಷಗಾನಕ್ಕೊಂದು ಭದ್ರ ಬುನಾದಿಯನ್ನು ಒದಗಿಸುತ್ತಾ ಬಂದದ್ದಂತೂ ಸುಳ್ಳಲ್ಲ. ಇಂತಹ ವಾತಾವರಣದಲ್ಲಿದ್ದು ಕೂಟಗಳನ್ನು ಕೇಳುತ್ತಾ, ಕಲಿತುಕೊಂಡು ಪ್ರಥಮ ಮಹಿಳಾ ಭಾಗವತರು ಎಂದೆನಿಸಿಕೊಂಡವರು ನರ್ಮದಾ ಶಿಬರೂರಾಯರು. ಕಲಾಪ್ರಪಂಚಕ್ಕೆ ಚಿರಪರಿಚಿತವೆನಿಸಿದ, ಸುಮಾರು 500 ವರ್ಷಗಳ ಇತಿಹಾಸವನ್ನು ಹೊಂದಿದ ಕಾಸರಗೋಡಿನ



ನರ್ಮದಾ ಶಿಬರೂರಾಯರ

ಪುಂಡೂರು ಮನೆತನದಲ್ಲಿ 1943 ಮೇ 12 ರಂದು ದಾಮೋದರ ಪುಣಿಂಚಿತ್ತಾಯ ಹಾಗೂ ಸರಸ್ವತಿ ದಂಪತಿಗಳ ಪುತ್ರಿಯಾಗಿ ನರ್ಮದಾ ಶಿಬರೂರಾಯರ ಜನನ. ಐದನೇ ತರಗತಿವರೆಗಿನ ವಿದ್ಯಾಭ್ಯಾಸವಷ್ಟೇ ಅವರಿಗೆ ದೊರಕಿತು. ಜೀವನ ಶಿಕ್ಷಣವೆಲ್ಲವೂ ಮನೆಯಲ್ಲಿಯೇ. ಅಂದಿನ ಕಾಲಕ್ಕೆ ಇಷ್ಟಾದರೂ ವಿದ್ಯಾಭ್ಯಾಸವನ್ನು ಪಡೆದುಕೊಳ್ಳುವುದೇ ದೊಡ್ಡ ವಿಚಾರ. ಯಕ್ಷಗಾನ ಕೂಟಗಳು ನಿರಂತರವಾಗಿ ನಡೆಯುತ್ತಿದ್ದ ಮನೆತನ ಪುಂಡೂರು ಮನೆತನ. ಮನೆಯ ಹೆಮ್ಮಕ್ಕಳಿಗೆ ನೇರವಾಗಿ ಕುಳಿತು ಕೂಟಗಳನ್ನು ಆಸ್ವಾದಿಸುವುದು ಕಷ್ಟಸಾಧ್ಯವಾದರೂ ಕಿವಿಯಾರೆ ಕೇಳಿಯಾದರೂ ಕಲೆಯ ಮೇಲಿನ ಒಲವನ್ನು ಬೆಳೆಸಿಕೊಂಡ ಕಲಾಪ್ರೇಮಿ ಮಹಿಳೆಯರು ಅದೆಷ್ಟೋ ಮಂದಿ ಆಗಿಹೋಗಿದ್ದಾರೆ. ಹೀಗೆ ಆಸಕ್ತಿ ಬೆಳೆಸಿಕೊಂಡವರಲ್ಲಿ ಒಬ್ಬರು ನರ್ಮದಾ ಶಿಬರೂರಾಯರು. ಬೇರೆ ಬೇರೆ ಕ್ಷೇತ್ರಗಳಲ್ಲಿ ಅನೇಕ ಕಲಾವಿದರಿದ್ದ ಮನೆತನ ಇವರದು. ಕೂಟಗಳು ಮನೆಯಲ್ಲೇ ನಡೆಯುತ್ತಿದ್ದ ಕಾರಣ ಅದುವೇ ಇವರ ಯಕ್ಷಗಾನ ಪ್ರೀತಿಗೆ ಮೂಲ ಕಾರಣವಾಯಿತು. ತಾನೂ ಯಕ್ಷಗಾನದಲ್ಲಿ ಹಾಡುವುದಕ್ಕೆ ಕಲಿಯಬೇಕು ಎನ್ನು ತುಡಿತ ಹೆಚ್ಚಾಯಿತು. ಇವರ ಯಕ್ಷಗಾನ ಪ್ರೀತಿಗೆ ನೀರೆರೆದು ಗುರುಗಳಾದವರು ಇವರ ದೊಡ್ಡಪ್ಪನ ಮಗ ಅಣ್ಣ ಶ್ರೀ ಗೋಪಾಲಕೃಷ್ಣ ಪುಣಿಂಚಿತ್ತಾಯರು. ತನ್ನ ಮಗನಿಗೆ ಕಲಿಸುತ್ತಾ ಇದ್ದಾಗಲೇ ನರ್ಮದಾ ಅವರ ಆಸಕ್ತಿಯನ್ನು ಕಂಡು, ಅವರಿಗೂ ತೆಂಕುತಿಟ್ಟು ಭಾಗವತಿಕೆಯ ಸಂಗತಿಗಳನ್ನು ಕಲಿಸಿಕೊಡುತ್ತಾ ಬಂದರು. ಎಲ್ಲವನ್ನು ಸಾವಧಾನದಿಂದಲೇ ಕಲಿತುಕೊಂಡು ತಾಳಮದ್ದಳೆಗಳಲ್ಲಿ ತೊಡಗಿಸಿಕೊಳ್ಳುವವರೆಗೆ ಬೆಳೆದರು. ತಮ್ಮ ಹದಿನೈದನೇ ವಯಸ್ಸಿನಲ್ಲಿಯೇ ಮುಳ್ಳೇರಿಯಾ ಶಾಲೆಯಲ್ಲಿ ನಡೆದ "ಮಾಗಧ ವಧೆ" ಪ್ರಸಂಗದ ತಾಳಮದ್ದಳೆಯೊಂದರಲ್ಲಿ ಅಣ್ಣಂದಿರ ಹಿಮ್ಮೇಳದ ಸಹಕಾರದೊಂದಿಗೆ ಮೊದಲ ಬಾರಿಗೆ ರಂಗಪ್ರವೇಶ ಮಾಡಿದರು. ಈ ಸಂದರ್ಭ ಇವತ್ತು ಸ್ತ್ರೀಯರು ಯಕ್ಷರಂಗದ ಹಿಮ್ಮೇಳದಲ್ಲಿ ತೊಡಗಿಸಿಕೊಳ್ಳುವುದಕ್ಕೆ ನಾಂದಿಯಾಯಿತು. ಯಕ್ಷರಂಗದಲ್ಲಿ ಪ್ರಥಮ ಮಹಿಳಾ ಭಾಗವತೆಯಾಗುತ್ತೇನೆ ಎಂಬ ಯೋಚನೆಯೂ ಅವರಿಗೆ ಆ ಕಾಲದಲ್ಲಿ ಇದ್ದಿರಲಿಕ್ಕಿಲ್ಲ. ಕಲ್ಲಿಕೋಟೆ ಆಕಾಶವಾಣಿಯಲ್ಲಿ ಅವರ ಭಾಗವತಿಕೆಯ 'ಶರಸೇತು ಬಂಧನ' ತಾಳಮದ್ದಳೆ ಹಾಗೂ ಮಂಗಳೂರು ಆಕಾಶವಾಣಿಯಲ್ಲಿ 'ಬಭ್ರುವಾಹನ ಕಾಳಗ' ಎಂಬ ತಾಳಮದ್ದಳೆ ಪ್ರಸಾರಗೊಂಡಿದೆ. ರಾತ್ರಿ ಹೊತ್ತು ನಡೆಯುವ ಯಕ್ಷಗಾನಗಳಲ್ಲಿ ಇವರು ಭಾಗವಹಿಸಿದ್ದು ಕಡಿಮೆ. ಹೆಚ್ಚಾಗಿ ತಮ್ಮ ಅಣ್ಣಂದಿರೋ ಅಥವಾ ಮನೆಯವರು ಯಾರಾದರೂ ಹಿಮ್ಮೇಳದಲ್ಲಿ ಇರುವ ಕೂಟಗಳಲ್ಲಿ ಇವರು ಭಾಗವಹಿಸುತ್ತಾ ಇದ್ದರು. ಎಡನೀರು ಈಶ್ವರಾನಂದ ಭಾರತೀ ಸ್ವಾಮಿಗಳ ಕಾಲದಲ್ಲಿ ಅನೇಕ ಕೂಟಗಳು ನರ್ಮದಾ ಶಿಬರೂರಾಯರ ಭಾಗವತಿಕೆಯಲ್ಲಿ ನಡೆದಿವೆ. ದಾಮೋದರ ಮಂಡೆಚ್ಚರು ಕೂಡ ಇವರಿಗೆ ಭಾಗವತಿಕೆಯ ಕೆಲವು ಸೂಕ್ಷ್ಮಗಳನ್ನು ಕಲಿಸಿದ್ದರಂತೆ. ಪುರುಷೋತ್ತಮ ಶಿಬರೂರಾಯರನ್ನು ಕೈ ಹಿಡಿದ ಬಳಿಕ ಪ್ರೋತ್ಸಾಹ ದೊರಕಿದರೂ ಮನೆಯ ಜವಾಬ್ದಾರಿಗಳಿಂದ ನರ್ಮದಾರಿಗೆ ಹೆಚ್ಚಾಗಿ ಭಾಗವತಿಕೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಆಗಿರಲಿಲ್ಲ. ಜೊತೆಗೆ ಸಾಮಾಜಿಕ ನಿರ್ಬಂಧಗಳೂ ಇತ್ತಲ್ಲ. ಆದರೂ ಕೆಲವು ಅವಕಾಶಗಳು ದೊರೆತಾಗ ಅದನ್ನು ಸದುಪಯೋಗಪಡಿಸಿಕೊಂಡರು. ಆಟ– ಕೂಟಗಳು ಸಿಗದೇ ಹೋದರೂ ಮನೆಯ ಕಾರ್ಯಕ್ರಮಗಳಲ್ಲಿ ಹಾಡುವ ಮುಖೇನವಾದರೂ ತಮ್ಮೊಳಗಿನ ಭಾಗವತಿಕೆಯನ್ನು ಜೀವಂತವಾಗಿರಿಸುವ ಪ್ರಯತ್ನವನ್ನು ಅವರು ಸದಾ ಮಾಡುತ್ತಲೇ ಇದ್ದರು. ಅವಕಾಶಗಳು ಕಡಿಮೆ ಇದ್ದರೂ ಸುಮಾರು 300 ಕ್ಕಿಂತಲೂ ಹೆಚ್ಚಿನ ಕಾರ್ಯಕ್ರಮಗಳಲ್ಲಿ ಭಾಗವತಿಕೆ ಮಾಡಿದ ಹೆಗ್ಗಳಿಕೆ ನರ್ಮದಾ ಶಿಬರೂರಾಯರದು. ಕೀರಿಕ್ಕಾಡು ಪ್ರಶಸ್ತಿಯನ್ನು ಪಡೆದುಕೊಂಡವರು ಇವರು. ಸಾಮಾಜಿಕವಾಗಿ ಹೊರಪ್ರಪಂಚಕ್ಕೆ ತೆರೆದುಕೊಳ್ಳುವುದು ಅಸಾಧ್ಯವೇ ಆಗಿದ್ದ ಕಾಲಘಟ್ಟದಲ್ಲಿ ಭಾಗವತಿಕೆಯನ್ನು ಕಲಿತು, ಮಹಿಳೆಯರಲ್ಲೊಂದು ಯಕ್ಷಗಾನ ಉಂಗದ ಬಗೆಗೆ ಆಶಾಕಿರಣವನ್ನು ಸದ್ದಿಲ್ಲದೇ ಮೂಡಿಸಿ ಹೋದ ನರ್ಮದಾ ಶಿಬರೂರಾಯರು 2016 ನೇ ಜೂನ್ 7 ರಂದು ತಮ್ಮ ಇಹಲೋಕಯಾತ್ರೆಯನ್ನು ಮುಗಿಸಿದರು. ಅವರು ಹಾಕಿದ ಅಡಿಪಾಯ ಇಂದು ಭದ್ರವಾಗಿದೆ. ಮಹಿಳಾ ಕಲಾವಿದರು ಯಕ್ಷಗಾನವನ್ನು ಉಳಿಸಿ, ಬೆಳೆಸುವ ಪ್ರಯತ್ನದಲ್ಲಿ ನಿರತರಾಗಿದ್ದಾರೆ ಎಂಬುವುದೇ ಸಂತಸದ ವಿಷಯ.




*ಸಾಯಿಸುಮಾ ಎಂ. ನಾವಡ*

## ಡಿಬೇಟ್ ಕಾರ್ನರ್ – ಸಂವಾದಕ್ಕೊಂದು ವೇದಿಕೆ

ನಮ್ಮ ಓದುಗರಿಗಾಗಿ ಡಿಬೇಟ್ ಕಾರ್ನರ್ ಎಂಬ ಅಂಕಣದಲ್ಲಿ ಯಕ್ಷಗಾನ ಕ್ಷೇತ್ರದ ಬೆಳವಣಿಗೆ/ ಬದಲಾವಣೆ, ಬೇಕು–ಬೇಡಗಳ ಕುರಿತು ಆರೋಗ್ಯಕರ ಸಂವಾದದಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿದೆ. ಈ ಚರ್ಚಾ ಕೂಟದಲ್ಲಿ ತಾವೂ ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದು. ನಿಮ್ಮ ಲೇಖನಗಳು ನಮ್ಮ ವೆಬ್ ಸೈಟ್ nyt.1ngo.in ಹಾಗು ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತದೆ. ಬರುವ ತಿಂಗಳ ಸಂಚಿಕೆಯ ಚರ್ಚೆಗೆ ನಿಮ್ಮ ಮುಂದಿಡುತ್ತಿರುವ ***ವಿಷಯ: ಹಳೆಯ ಪ್ರಸಂಗಗಳಿಗೆ ಹೊಸ ವಿಭಿನ್ನ ಶೀರ್ಷಿಕೆ ಬದಲಿಸಿ ನೀಡುವುರಿಂದ ಆಗುವ ಪರಿಣಾಮಗಳು.*** ನಿಮ್ಮ ಲೇಖನ, ಅಭಿಪ್ರಾಯಗಳನ್ನು ಕಳುಹಿಸಬೇಕಾದ ವಾಟ್ಸಾಪ್ ಸಂಖ್ಯೆ –9449686807. ನಿಮ್ಮ ಲೇಖನ ಎ ಫೋರ್ ಹಾಳೆಯಲ್ಲಿ ಒಂದು ಪುಟ ಮೀರದಿರಲಿ. ನಿಮ್ಮ ಬರಹ ನಮಗೆ ತಲುಪಬೇಕಾದ ಕೊನೆಯ ದಿನಾಂಕ 20–05–2022. ಆಯ್ದ ಉತ್ತಮ ಲೇಖನಕ್ಕೆ ಬಹುಮಾನವಿದೆ – ಸಂಪಾದಕರು

## ರಸಸ್ಫುರಣೆ – ಶೃಂಗಾರರಸ

ರಸಗಳ ರಾಜ ಶೃಂಗಾರ. ಯಕ್ಷಗಾನ ಪ್ರಸಂಗಗಳಲ್ಲೂ ಶೃಂಗಾರಕ್ಕೊಂದು ವಿಶಿಷ್ಟ ಸ್ಥಾನವಿದೆ. ಸುಲಲಿತ ಪದಾವಲಿ, ಸುಂದರ ಅಭಿನಯ, ಕಾವ್ಯವನ್ನು ಕಟ್ಟಿಕೊಡುವ



ರಜನೀಶ ಹೊಳ್ಳ

ವಾಗ್ವಿಶೇಷತೆ ಇವೆಲ್ಲ ಶೃಂಗಾರರಸವನ್ನು ಚೆನ್ನಾಗಿ ಪೋಷಿಸುತ್ತವೆ. ರತಿಯು ಶೃಂಗಾರದ ಸ್ಥಾಯಿಭಾವ. ನಾಯಕನಿಗೆ ನಾಯಕಿ, ನಾಯಕಿಗೆ ನಾಯಕ ಈ ರಸಕ್ಕೆ ಆಲಂಬನವಾಗಿದೆ.ಚಂದ್ರ, ಬೆಳದಿಂಗಳು, ಭ್ರಮರ, ಲತಾಮಂಟಪ, ಉದ್ಯಾನ, ಏಕಾಂತ ಮೊದಲಾದವು ಉದ್ದೀಪನವಿಭಾವಗಳು. ಕುಡಿನೋಟ, ಕಳ್ಳನೋಟ, ಭ್ರೂವಿಕ್ಷೇಪ, ತುಟಿಕಚ್ಚುವುದು, ಕೆಲವು ಅಂಗಚೇಷ್ಟೆ ಇವೆಲ್ಲ ಇದರ ಅನುಭಾವಗಳು. ಲಜ್ಜೆ, ಹಾಸ ಇವೆಲ್ಲ ಸಂಚಾರಿ ಭಾವಗಳು. ಸಿಟ್ಟು, ಉಗ್ರತೆ, ಆಲಸ್ಯ, ಜುಗುಪ್ಸೆ, ಮರಣ ಇಂತಹ ಸಂಚಾರಿಭಾವವನ್ನು ಹೊರತು ಪಡಿಸಿ ಉಳಿದವು ಈ ರಸಕ್ಕೆ ಪೋಷಕವಾಗಿತ್ತವೆ. ಇದರ ವರ್ಣ ಶ್ಯಾಮ, ದೇವತೆ ವಿಷ್ಣು. ಶೃಂಗಾರದಲ್ಲಿ ಮುಖ್ಯವಾಗಿ ಎರಡು ವಿಧ– 1.ಸಂಭೋಗ (ಸಂಯೋಗ), 2. ವಿಪ್ರಲಂಭ. ಕಾವ್ಯಲಕ್ಷಣಕಾರರ ಮತದಂತೆ ಸಂಯೋಗಶೃಂಗಾರಕ್ಕಿಂತಲೂ ವಿಪ್ರಲಂಭಶೃಂಗಾರವೇ(ನಾಯಕ/ನಾಯಕಿ ಸಮೀಪದಲ್ಲಿ ಇಲ್ಲದೆ ಇರುವುದು) ಹೆಚ್ಚು ಶಕ್ತಿಯುತವಾಗಿದೆ. ಯಕ್ಷಗಾನ ಪ್ರಸಂಗದ ಉದಾಹರಣೆಯನ್ನು ನೋಡುವುದಾದರೆ, ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ ವಿರಚಿತ ಭೀಷ್ಮಪ್ರತಿಜ್ಞೆ ಪ್ರಸಂಗದ ಶಂತನುವಿನ ಪದ್ಯ.




ಶೃಂಗಾರ ರಸ

ಕಲಕೀರವಾಣಿ ನೀನಾರಾತ್ಮಭವಳು/ ಚೆಲುವೆ ನಿನ್ನಯ ಪೆಸರ ವಂಚಿಸದೆ ಪೇಳು// ಮಲಯಗಂಧಿನಿ ಎನ್ನ ಸ್ಮರದಹಿಪ ಕೇಳು/ ಒಲಿಸುವರೆ ಬಂದಿಹೆನು ಒಲವಿನಿಂದೇಳು// ಇಲ್ಲಿ ಕಲಕೀರ ವಾಣಿ, ಚೆಲುವೆ, ಮಲಯಗಂಧಿನಿ, ಸ್ಮರದಹಿಪ ಈ ಪದಗಳು ಶೃಂಗಾರರಸದಭಿನಯಕ್ಕೆ, ರಸಸ್ಫುರಣೆಗೆ ಪೂರಕವಾಗಿವೆ. ಶಂತನುವಿಗೆ ಸತ್ಯವತಿಯೇ ಆಲಂಬನ. ನದಿಯ ಜುಳು ಜುಳು ನಾದ, ಸತ್ಯವತಿಯ ಮೈಯಿಂದ ಬಂದ ಗಂಧ, ಯಮುನೆಯನ್ನು ಕಂಡಾಗ ಗಂಗೆಯ ಸ್ಮರಣೆ ಇವೆಲ್ಲ ಉದ್ದೀಪನವಿಭಾವವಾಗಿವೆ. ಸತ್ಯವತಿಯ ಸೌಂದರ್ಯವನ್ನು ಸವಿಯುವುದೇ ಅನುಭಾವ. ಹೀಗೆ ಅಭಿನಯ ಮತ್ತು ನಾಟ್ಯಗಳಿಂದ ಶೃಂಗಾರಾಭಿವ್ಯಕ್ತಿಯಾಗುತ್ತದೆ. ಯಕ್ಷಗಾನದಲ್ಲಿ ಅರ್ಥಗಾರಿಕೆಯು ಒಂದು ವಿಶಿಷ್ಟ ಶಕ್ತಿಯಾಗಿದೆ. ಅದು ಕೇವಲ ಪದ್ಯದ ಸಾರಾಂಶವನ್ನು ಹೇಳುವುದಲ್ಲ. ಪದ್ಯ ಎಂಬ ಮೊಗ್ಗು ಹೂವಾಗಿ ಅರಳುವ ವಿಕಾಸದ ಸೊಬಗು. ಸೂತ್ರವು ವ್ಯಾಖ್ಯಾನವಾಗುವ ರೀತಿ. ಕಲ್ಲು ಶಿಲ್ಪವಾಗುವ ಉಪಕ್ರಮ. ಇಲ್ಲಿ ಈ ಪದ್ಯಕ್ಕೆ ಅರ್ಥದಲ್ಲಿ ಸ್ತ್ರೀಯ ಸೌಂದರ್ಯ ವರ್ಣನೆ, ಸ್ಮರನ ಬಾಧೆಯಿಂದಾದ ಸ್ಥಿತಿ, ಸಂಸಾರದ ಸವಿಯ ಸಾರ ಇವನ್ನೆಲ್ಲ ಮಾತನಾಡುವ ಮೂಲಕ ಶೃಂಗಾರರಸದಡುಗೆಯನ್ನು ಬಡಿಸಿ ಪ್ರೇಕ್ಷಕನು ಸವಿರುಚಿಯುಣ್ಣುವಂತೆ ಮಾಡಬಹುದು. ಇದು ಸಂಯೋಗಶೃಂಗಾರಕ್ಕೆ ಒಂದು ಉದಾಹರಣೆ. ವಿಪ್ರಲಂಭ ಶೃಂಗಾರದ ಉದಾಹರಣೆಯಾಗಿ ಒಂದು ಪದ್ಯವನ್ನು ನೋಡುವುದಾದರೆ, ಜಾನಕೈ ತಿಮ್ಮಪ್ಪ ಹೆಗಡೆ ವಿರಚಿತ ಮಾರುತಿ ಪ್ರತಾಪದ ಸತ್ಯಭಾಮೆಯ ಪದ್ಯ. ಬಾರನ್ಯಾಕೆ ಮಾರಜನಕ ಸಾರಸಾಕ್ಷಿಯೇ/ ಮೂರುದಿನಗಳಾಯ್ತು ಬರದೆ ಬಾರಿ ಬಳಲಿದೆ// ಯಾರ ನಾರಿ ನಿಲಯದೊಳಗೆ ಸೇರಿರುವನೋ/ ನೀರೆ ಪೋಗಿ ಕರೆದು ತಾರೆ ಮಾರಜನಕನ// ಇಲ್ಲಿ ಬಾರನ್ಯಾಕೆ ಮಾರಜನಕ, ಮೂರುದಿನಗಳಾಯ್ತು ಬರದೆ ಇವೆಲ್ಲ ವಿರಹದ ವೇದನೆಯನ್ನು ಬಹಳ ಚೆನ್ನಾಗಿ ಪ್ರಕಟಿಸುತ್ತವೆ. ಯಾರ ನಾರಿ ನಿಲಯದೊಳಗೆ ಸೇರಿ ಕೊಂಬನೋ ಎಂಬ ಮತ್ಸರವು ವಿಪ್ರಲಂಭ ಶೃಂಗಾರವನ್ನು ಮತ್ತಷ್ಟು ಉದ್ದೀಪನ ಗೊಳಿಸಿದೆ. ನೀರೆ ಪೋಗಿ ಕರೆದು ತಾರೆ ಎಂಬಲ್ಲಿ ವಿರಹವನ್ನು ಸಹಿಸದ ಭಾವ ವ್ಯಕ್ತವಾಗುತ್ತದೆ. ಬೇಸರ, ಹತಾಶೆಗಳು ಅನುಭಾವವಾಗಿ ಮತ್ಸರ ಸಂಚಾರಿ ಭಾವವಾಗಿದೆ. ರತಿಯು ಸ್ಥಾಯಿಭಾವವಾಗಿ ಶೃಂಗಾರರಸಸ್ಫುರಣೆಯಾಗುತ್ತದೆ.

## ಮೆಲುಕು

ನನಗೆ ಆಗ ಐದನೆಯ ಇಯತ್ತೆ. ಕೋಟ ದ ಸಮೀಪವೇ ಗೊಬ್ಬರಬೆಟ್ಟು, ಏಳೆಲೆ ಪೇಟೆ, ಹಂದಟ್ಟು ಎಂಬೆಲ್ಲಾ ಹೆಸರಿರುವ ನನ್ನೂರು. ಪಟೇಲರ ಮನೆ ಎಂತಲೇ ಪ್ರಸಿದ್ಧವಾದ ಯಕ್ಷಗಾನ ಕಲೆಗೂ ಕಲಾವಿದರಿಗೂ ಆಪ್ತವಾದ ಮನೆತನ ನಮ್ಮದು. ಮನೆಯ ಬಳಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಆಗ ಶ್ರೀ ನರಸಿಂಹ ಉಪಾಧ್ಯ, ಶ್ರೀ ರಾಘವೇಂದ್ರ ಹಂದೆ, ಶ್ರೀ ನರಸಿಂಹ ಹಂದೆ ಹಾಗೂ ಶ್ರೀ ದುಗ್ಗಪ್ಪ ಶೆಟ್ಟಿ ಮೊದಲಾದ ಶಿಕ್ಷಕರಿದ್ದರು. ಸಂಜೆಯ ' ಆಟ'ದ ವೇಳೆ, ಅಂದರೆ ಯಕ್ಷಗಾನಕ್ಕೂ ಸಮಯ ಮೀಸಲು. ಆಸಕ್ತ ಹುಡುಗರಿಗೆ ತಾಳಮದ್ದಳೆ ಕೂಟ ಏರ್ಪಡಿಸಿ ಸಂತಸ ಪಡುವುದು ದುಗ್ಗಪ್ಪ ಮಾಸ್ತರರಿಗೆ ಉತ್ಸಾಹ. ಆಟ ಆಡಲು ಹೋಗದ ವಿದ್ಯಾರ್ಥಿಗಳೇ ನಮಗೆ ಶ್ರೋತೃ ಪ್ರೇಕ್ಷಕರು.. ಶೃತಿ ಇಲ್ಲದೆ ತನ್ನದೇ ರಾಗ ತಾಳ ತಾನ ದಲ್ಲಿ ಮಾಸ್ತರರೇ ಭಾಗವತಿಕೆ ಮಾಡುತ್ತಿದ್ದರು. ತಾಳಮದ್ದಳೆ ಗಾಗಿಯೇ ರಚಿಸಿದ ಪ್ರಸಿದ್ಧ ಪ್ರಸಂಗ, " ಅಂಗದ ಸಂಧಾನ " ವೇ ಮಾಸ್ತರ ಆಯ್ಕೆ. ಅಂಗದ ಪ್ರಹಸ್ತರ ಸಂಭಾಷಣೆಯ ಪದ ಗಳನ್ನು ಬಾಯಿಪಾಠ ಮಾಡಿಕೊಂಡಿದ್ದರು. ಪ್ರಶ್ನೆ... ಮಾತಿನೊಳಗೆ ಜಾಣ ಅಹುದೂ:: ನಿನ್ನನು ಪೆತ್ತ ಮಾತೆ..? : ಹಾಗೇನೆ ಉತ್ತರ.. :: ಭೂತಳ ಪತಿ ರಾಮದೂತ ಅಂಗದನೆಂಬ ಪ್ರೀತಿಯ ಪೆಸರೆನಗೆ. :: ಮುಂದುವರಿದು...ಮರದಿಂದ :: ಮರಕೆ ಹಾರುವಿರಿ... :: ಹೀಗೆಯೆ ಈ ಪ್ರಸಂಗ ದ ಪದ್ಯಗಳು ಇಂದಿಗೂ ಚಿತ್ತ ಭಿತ್ತಿಯಲ್ಲಿ ಅಚ್ಚಳಿಯದೆ ಉಳಿಯುವಂತಾಯಿತು. : ಮುಗ್ಧ ಮನಸಿನ ಮಕ್ಕಳನ್ನು ಬಳಸಿ, ತನ್ನ ಆಸಕ್ತಿಯ ಯಕ್ಷ ಸಸ್ಯ ವನ್ನು ವೃಕ್ಷವನ್ನಾಗಿಸಿ ಕೊಳ್ಳುವ ಶಿಕ್ಷಕರು, ಗುರುವರ್ಯರೆಲ್ಲವರೂ ಅಭಿವಂದನಾರ್ಹರು. ಪ್ರಥಮತಃ ಮಕ್ಕಳಿಗೆ ಬಲವಂತದ ಬುದ್ಧಿಮಾತು ಪಥ್ಯವಾಗುವುದಿಲ್ಲ. ವಿಷಯ ಪಥ್ಯವಾದನಂತರ ಸತ್ವದ ಅರಿವಾಗುವುದು. ಸಮಾಧಾನ

ವೇನೆಂದರೆ ನಾವಿಂದು ತಣ್ಣಗೆ ಶಾಂತವಾಗಿ ನೆಮ್ಮದಿ ಯಲ್ಲಿರಲು ಕಾರಣವೇ “ಯಕ್ಷವೃಕ್ಷ” ದ ನೆರಳು ಅಂತ ಅಚಲವಾದ ನಂಬಿಕೆ. ಇಂದು ನನ್ನ ಈ ಅಭಿಮತ ವು ಇನ್ನೂ ಹಲವಾರು ಲಲಿತಕಲಾ ಆಸಕ್ತರದ್ದೂ ಆಗಿರಬಹುದು. ಸತ್ಯಾನುಭವಗಳ ಗಾನಯಾನ ರಾಗಮಾಲೆ ಯಾಗಿ. ಮುಂದುವರಿಯುವುದು.

**ಲೇಖಕರು: ಜನಾರ್ದನ ಹಂದೆ**

***ಓದುಗರ ಅನಿಸಿಕೆ*** – ನಾದ ನೂಪುರ ಡಿಜಿಟಲ್ ಪತ್ರಿಕೆ ಯಲ್ಲಿ ಕಾಲಮಿತಿಯ ಬಗ್ಗೆ ಪ್ರಕಟವಾದ ಲೇಖನ ಅತ್ಯಂತ ಸೂಕ್ತವಾಗಿದೆ. ಬದಲಾದ ಜೀವನ ಶೈಲಿಯೊಂದಿಗೆ ಎಲ್ಲವನ್ನೂ ತಳಕು ಹಾಕುವುದು ಸಮರ್ಥನೀಯವಲ್ಲ. ಯಕ್ಷಗಾನ ಆರಾಧನಾ ಕಲೆಯಾಗಿ ಬೆಳೆದು ಉಳಿದು ಬಂದಿದೆ. ಅದರಲ್ಲಿ ದೃಶ್ಯ ಮಾಧ್ಯಮದ ಔಚಿತ್ಯಕ್ಕೆ ಸಂಬಂಧಿಸಿ ವಿಪುಲ ತಾಂತ್ರಿಕ ಅಂಶಗಳು ಒಳಗೊಂಡಿವೆ. ಈ ತಾಂತ್ರಿಕ ಅಂಶಗಳು ಕಾಲಬಾಧಿತವಾದವುಗಳು ಎಂಬ ಅಂಶದ ಮೇಲೆ ಸಾಕಷ್ಟು ಬೆಳಕು ಚೆಲ್ಲಿದ್ದೀರಿ. ಇವರ ನಿರ್ವಹಣೆ ಚೆನ್ನಾಗಿದ್ದರೆ ಬೆಳಗಾಗುವ ತನಕವೂ ಒಂದಷ್ಟು ಮಂದಿ ಪ್ರೇಕ್ಷಕರು ಇರುತ್ತಾರೆ. ಜೀರೋ ಪ್ರೇಕ್ಷಕರಿರುವ ಕ್ರೀಡಾಂಗಣದಲ್ಲಿ ಆಟಗಾರ ಏಕಾಗ್ರತೆ ಕಳಕೊಂಡರೆ ವಿಕೇಟ್ ಉರುಳುತ್ತದೆ. ಅಲ್ಲಿ ಓರ್ವ ರೆಫರಿ ಇದ್ದಾನೆ. ಆತ ಔಟ್ ಎಂದು ಕೈ ಬೆರಳು ಎತ್ತುತ್ತಾನೆ. ಯಕ್ಷಗಾನದಲ್ಲಿ ಅಂಥ ವ್ಯಕ್ತಿ ಇಲ್ಲದಿರಬಹುದು. ಆದರೆ ಕಲಾವಿದರಿಗೆ ಸ್ವಯಂ ತೀರ್ಪುಗಾರಾಗಿರಬೇಕಾದ ಬದ್ಧತೆ ಇರಬೇಕಲ್ಲವೇ.! ಮುಖ್ಯವಾಗಿ ಈ ಸತ್ಯವನ್ನು ಜನ ಅರ್ಥ ಮಾಡಿಕೊಳ್ಳಬೇಕಲ್ಲವೇ! – ***ರಾಘವ ಶೆಟ್ಟಿ ಹಿರಿಯ ವಿಮರ್ಶಕರು***

## ಕಾಡುವ ಪಾತ್ರ/ ಪ್ರಸಂಗ/ ಸನ್ನಿವೇಶ

ಕಲಾವಿದರ ಯಕ್ಷಾನುಭವದ ಪ್ರಮುಖ ನೆನಪು/ಘಟನೆಗಳನ್ನು ದಾಖಲೀಕರಿಸುವ ಅಂಕಣ ಇದು. ಪ್ರತೀ ಸಂಚಿಕೆಯಲ್ಲಿ ಇಬ್ಬರು ಕಲಾವಿದರ ಅನುಭವಗಳನ್ನು ಇಲ್ಲಿ ಸಾದರಪಡಿಸುತ್ತಿದ್ದೇವೆ. ಈ ತಿಂಗಳ ಸಂಚಿಕೆಯಲ್ಲಿ ಕುಮುಟಾ ಗಣಪತಿ ನಾಯಕ್ ಹಾಗೂ ಹಾಸ್ಯಗಾರರಾದ ಹಳ್ಳಾಡಿ ಜಯರಾಮ ಶೆಟ್ಟಿಯವರ ಅನುಭವಗಳ ತುಣುಕು ಪ್ರಕಟವಾಗಿದೆ.

### ಕುಮುಟಾ ಗಣಪತಿ ನಾಯಕ್




ಯಕ್ಷಗಾನದ ಆಂಜನೇಯ ಎಂದ ಕೂಡಲೇ ಮನಸಿನೊಳಗೆ ಮೂಡುವ ಚಿತ್ರ ಅದೇ ಕಟ್ಟುಮಸ್ತಾದ ಆಳ್ತನದ ಗೋವಿಂದ ನಾಯಕ್ ಅವರು. ಹಾಗೂ ಅದೇ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವ ಕುಮುಟಾ ಗಣಪತಿ ನಾಯಕ್. ಇವರ ಕುಟುಂಬಿಕರು ಮುತ್ತಾತನ ಕಾಲದಿಂದಲೂ ಯಕ್ಷಗಾನ ತೊಡಗಿಸಿಕೊಂಡವರು. ಆದ್ದರಿಂದಲೇ ಗಣಪತಿ ನಾಯಕ್ ಅವರು ಮಿಲಿಟ್ರಿಯಲ್ಲಿ ಸೇವೆ ಸಲ್ಲಿಸುತ್ತಿದ್ದರೂ ಯಕ್ಷಗಾನದ ಸೆಳೆತ ಅವರನ್ನು ಮತ್ತೆ ಯಕ್ಷಲೋಕಕ್ಕೆ ಕಾಲಿಡುವಂತೆ ಮಾಡಿತು. ಗಣಪತಿಯವರ ತಂದೆ ಗೋವಿಂದ ನಾಯಕರ ಹನುಮಂತನ ಪಾತ್ರವೇ ಇವರ ಹನುಮಂತನ ಪಾತ್ರಕ್ಕೆ ಪ್ರೇರಣೆ. ಈ ಬಗ್ಗೆ ಅಭಿಮಾನದಿಂದ ಮಾತನಾಡುವ ಗಣಪತಿ, "ಹನುಮಂತನ ಪಾತ್ರ ನಿರ್ವಹಣೆ ಎನ್ನುವುದು ನನಗೆ ಹನುಮಂತನ ಆರಾಧನೆಯಂತೆ. ಬಣ್ಣ ಹಚ್ಚಿ ತೆಗೆಯುವವರೆಗೂ ನಾನು ಹನುಮಂತನೇ ಆಗಿರುತ್ತೇನೆ." ಎಂದು ಹೇಳುತ್ತಾರೆ. ಲಂಕಾದಹನ ಪ್ರಸಂಗದಲ್ಲಿ ಹಾರಿದನು ಹನುಮಂತ. ಲಂಕೆಗೆ ಹಾರಿದ ಮೇಲೆ ಸೀತಾದೇವಿಯನ್ನು ಕಂಡಾಗ ಉಂಟಗುವ ಸಂತೋಷ ಇವರಿಗೆ ತುಂಬ ಖುಷಿ ನೀಡುವ ಸನ್ನಿವೇಷ. ಹನುಮಂತ ಸೀತೆಯನ್ನು ಕಂಡು ಮರದಲ್ಲಿ ಕುಳಿತು ಅಳುವಾಗ ಮರಿಯಪ್ಪಾಚಾರ್ ಅನ್ನುವಂತಹಾ ಭಾಗವತರು ಕೂಡಾ ಒಮ್ಮೆ ಅತ್ತು ಬಿಟ್ಟಿದ್ದರಂತೆ. ಮೋಹನದಾಸ್ ಶೆಣೈ ಯವರ ರಾಮ ಹಾಗೂ ಇವರ ಹನುಮಂತನ ಜೋಡಿ ರಂಗದಲ್ಲಿ ಸುಂದರವಾಗಿ ಮೂಡಿ ಬರುತ್ತದೆ ಎಂದು ನುಡಿಯುತ್ತಾರೆ ಗಣಪತಿ. ಅಲ್ಲದೆ ಶಶಿಕಾಂತ್ ಶೆಟ್ಟರ ಸೀತೆಯ ಪಾತ್ರ ಸಭಿಕರ ಕಣ್ಣಲ್ಲಿ ನೀರು ತರಿಸುತ್ತದೆ ಎಂದು ನೆನಪಿಸಿಕೊಳ್ಳುತ್ತಾರೆ. ಹನುಮಂತನ ಪಾತ್ರವಲ್ಲದೆ ಘಟೋತ್ಕಜ, ಕೀಚಕ ವಧೆಯ ವಲಲ, ಭಸ್ಮಾಸುರ ಮೋಹಿನಿಯ ಭಸ್ಮಾಸುರ, ಭೀಷ್ಮ ವಿಜಯದ ಸಾಲ್ವ, ಭೀಷ್ಮ ಎರಡೂ, ಜಾಂಬವತೀ ಕಲ್ಯಾಣದ ಜಾಂಬವ, ಪಟ್ಟಾಭಿಷೇಕದ ರಾಮ ಇವರ ಮೆಚ್ಚಿನ ಪಾತ್ರಗಳು."ಪಟ್ಟಾಭಿಷೇಕದ ರಾಮನೆಂದರೆ, ರಾಮನನ್ನು ಕಾಡಿಗೆ ಕಳಿಸುವಲ್ಲಿಂದ ಏನನ್ನು ಅನುಭವಿಸಬೇಕೋ ಅದನ್ನೆಲ್ಲಾ ರಂಗಸ್ಥಳದಲ್ಲಿ ಅನುಭವಿಸುತ್ತೇನೆ. ಕಣ್ಣಲ್ಲಿ ನೀರು ನಿಲ್ಲುವುದಿಲ್ಲ. ನಾವೇ ಪಾತ್ರವಾಗಿಬಿಟ್ಟರೆ ತುಂಬಾ ಸಂತೋಷ ಕೊಡುತ್ತದೆ." ಎಂದು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಯಕ್ಷಗಾನ ಕಲಾವಿದನಾಗಿ ಮಾತ್ರವಲ್ಲದೆ ಮೇಳದ ಯಜಮಾನಿಕೆಯನ್ನೂ ಕೆಲ ಕಾಲ ನಡೆಸಿದ ಇವರು ಮೇಳ ನಡೆಸುವ ಕೆಲಸ ಕಷ್ಟದ್ದು ಎನ್ನುವುದು ಇವರ ಅಭಿಪ್ರಾಯ. ಯಾವ ಕಲಾವಿದನೂ ಮೇಳ ಮಾಡಿಕೊಂಡು ಕಲಾವಿದನನ್ನು ಆಳಲಿಕ್ಕಾಗುವುದಿಲ್ಲ. ಮೇಳ ಆಳುವುದಕ್ಕೆ ದರ್ಪವೂ ಬೇಕು, ಸೌಮ್ಯತೆಯೂ ಬೇಕು.ಎಂದವರು ಹೇಳುತ್ತಾರೆ. ರಂಗದ ಶಿಸ್ತಿನ ಬಗ್ಗೆ ಮಾತನಾಡುವ ಇವರು ಇವತ್ತಿಗೂ ನನಗಿಂತ ಸೀನಿಯರ್ ಕಲಾವಿದರು ಯಾರಾದರೂ ಇದ್ದರೆ ಅವರ ಕಾಲಿಗೆ ನಮಸ್ಕಾರ ಮಾಡಿ ನಾನು ರಂಗಕ್ಕೆ ಹೋಗುತ್ತೇನೆ. ಕಲಾವಿದನಾದವ ರಂಗಕ್ಕೆ ಬರುವಾಗ ಅನ್ನ ಕೊಡುವ ರಂಗಸ್ಥಳಕ್ಕೆ ನಮಸ್ಕಾರ ಮಾಡಿ ಬರಬೇಕು. ಚೌಕಿಯಲ್ಲಿ ಹೇಗಿರಬೇಕು, ಗಣಪತಿ ಪೂಜೆ ಮಾಡಿದ ನಂತರ ಅಲ್ಲಿ ಎಲೆ ಅಡಿಕೆಯನ್ನೂ ಹಾಕ್ಲಿಕ್ಕಿಲ್ಲ, ಈ ರೀತಿಯ ಶಿಸ್ತನ್ನೆಲ್ಲ ಬೆಳೆಸಿಕೊಂಡರೆ ಯಕ್ಷಗಾನವನ್ನು ಮೀರಿಸುವ ಕಲೆ ಮತ್ತೊಂದಿಲ್ಲ. ನಾವೆಲ್ಲ ಇದರಲ್ಲಿ ಉಪ್ಪನ್ನವನ್ನು ಉಂಡಿದ್ದೇವೆ. ಹಣ ಎಷ್ಟು ಗಳಿಸಿದ್ದೇವೆ ಎನ್ನುವುದಕ್ಕಿಂತಲೂ ಜನರ ಪ್ರೀತಿಯನ್ನು ಸಂಪಾದಿಸಿದ್ದೇವೆ. ಎಂದು ಹೆಮ್ಮೆಯಿಂದ ಹೇಳುತ್ತಾರೆ. ದೇಹದ ಫಿಟ್ ನೆಸ್ ಹಾಗೂ ಆರೋಗ್ಯಕ್ಕಾಗಿ ವ್ಯಾಯಾಮ ಮಾಡುವ ದಿನಚರಿಯನ್ನು ಇವರು ಪಾಲಿಸಿಕೊಂಡು ಬಂದಿದ್ದಾರೆ. ರಂಗದಲ್ಲಿ ಭಾಷೆಯ ಬಳಕೆ ಹಾಗೂ ಸಾಹಿತ್ಯದ ಅನುಭವವನ್ನು ಕೊಟ್ಟಿರುವ ಹೊನ್ನಪ್ಪ ಗೋಕರ್ಣ ಹಾಗೂ ರಂಗದಲ್ಲಿ ನರ್ತನ ಹೇಳಿಕೊಟ್ಟ ಉಮೇಶ್ ಭಟ್ ಬಾಡ ಇವರನ್ನು ಗಣಪತಿ ನಾಯಕ್ ಕೃತಜ್ಞತೆಯಿಂದ ಸ್ಮರಿಸುತ್ತಾರೆ

### ಹೆಸರು: ಮುಖ್ಯಪ್ರಾಣ ಕಿನ್ನಿಗೋಳಿ, ಹಾಸ್ಯ ಕಲಾವಿದರು



ಮುಖ್ಯಪ್ರಾಣ ಕಿನ್ನಿಗೋಳಿ,

ಯಕ್ಷಗಾನದ ಅನುಭವ: 51 ವರ್ಷಗಳು

ತಂದೆ: ರುಕ್ಕಯ್ಯ ಶೆಟ್ಟಿಗಾರ್, ತಾಯಿ:ಶೇಷಿ ಶೆಟ್ಟಿಗಾರ್. ಧರ್ಮ ಪತ್ನಿ: ಗುಲಾಬಿ, ಮಗ: ಯಶವಂತ್

ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಯಕ್ಷಗಾನ ಬಯಲಾಟ ಅಕಾಡೆಮಿ ಪ್ರಶಸ್ತಿ, ಹಾಗು ಇನ್ನಿತರ ಪ್ರಶಸ್ತಿಗಳು ಲಭಿಸಿವೆ.

ಬಡಗಿನ ಸಾಲಿಗ್ರಾಮ ಮೇಳದಲ್ಲಿ ದಿ. ಕಾಳಿಂಗ ನಾವಡರು ಬರೆದ ನಾಗಶ್ರೀ ಪ್ರಸಂಗದಲ್ಲಿ ಕೈರವನ ಪಾತ್ರ ನಿರ್ವಹಿಸಿ ಹೆಚ್ಚು ಪ್ರಚಾರಕ್ಕೆ ಬಂದ ಹಿರಿಯ ಕಲಾವಿದ ಮುಖ್ಯಪ್ರಾಣ ಕಿನ್ನಿಗೋಳಿಯವರು ಅದಕ್ಕೂ ಮೊದಲು ತೆಂಕಿನಲ್ಲಿ 10 ವರ್ಷ ಸೇವೆ ಸಲ್ಲಿಸಿದವರು."ನಮ್ಮ ಹಾಸ್ಯಗಳು ಈಗಿನ ಜನರಿಗೆ ಮನರಂಜನೆಯಾಗುವುದಿಲ್ಲ. ನಮ್ಮದು ಗಂಭೀರ ಹಾಸ್ಯ ಪಾತ್ರಗಳು, ಪ್ರಸಂಗದ ಒಳಗಡೆಯೇ ತಿರುಗುವಂಥದ್ದು. ಈಗಿನ ಪ್ರಸಂಗಗಳಲ್ಲಿ ಎಲ್ಲೆಲ್ಲೋ ಹೋಗಿ ಎಲ್ಲೆಲ್ಲೋ ಬರ್ತ್ತಾರೆ. ಎಂದು ಹೇಳುವ ಮೂಲಕ ಬದಲಾದ ಪ್ರೇಕ್ಷಕರ ಅಭಿರುಚಿಯ ಬಗ್ಗೆ ಅವರು ಖೇದ ವ್ಯಕ್ತಪಡಿಸುತ್ತಾರೆ. ಹಾಸ್ಯ ಪಾತ್ರಕ್ಕೆ ಅದರದೇ ಆದ ಘನತೆ ಇದೆ ಎಂದು ಹೇಳುವ ಮುಖ್ಯಪ್ರಾಣ ಅವರದ್ದು ರಂಗ ಶಿಸ್ತನ್ನು ಮೀರದ ಗಂಭೀರ ಹಾಸ್ಯ. ಹಾಸ್ಯ ಪಾತ್ರಗಳ ಬಗ್ಗೆ ಅವರು "ಕಡೆಯ ಮೂರು ವರ್ಷ ನಾನು ಕಟೀಲು ಮೇಳದಲ್ಲಿದ್ದೆ. ಪೌರಾಣಿಕ ಪ್ರಸಂಗದಲ್ಲಿ ಅಚ್ಚುಕಟ್ಟಾಗಿ ಗಂಭೀರವಾಗಿ ಮಾತನಾಡುತ್ತಿದ್ದೆ. ಜನರನ್ನು ನಗಿಸುವ ಗೋಜಿಗೆ ಹೋಗಲಿಲ್ಲ. ನನ್ನ ನಿರ್ವಹಣೆ ಏನಿರಬೇಕೋ ಅದನ್ನೇ ಮಾಡುತ್ತಿದ್ದೆ." ಎಂದು ನುಡಿಯುತ್ತಾರೆ. ನಳದಮಯಂತಿಯ ಬಾಹುಕ, ನಾರದ, ವಿಜಯ, ರಜಕ, ಭೀಷ್ಮ ಪ್ರಸಂಗದ ವೃದ್ಧ ಬ್ರಾಹ್ಮಣ, ಶನಿ ಪೀಡಿತ ವಿಕ್ರಮ ಚೆಲುವೆ ಚಿತ್ರಾವತಿಯ ಅಡಗೂಲಜ್ಜಿ, ಕಾಂಚನ ಸಿರಿಯ ಪ್ರೇತ, ಸ್ವಪ್ನ ಸಾಮ್ರಾಜ್ಯದ ಶೂರಸೇನ, ಇವರ ಮೆಚ್ಚಿನ ಪಾತ್ರಗಳು. ಸಾಲಿಗ್ರಾಮ, ಮಂದಾರ್ತಿ ಹಾಗೂ ಕಟೀಲು ಮೇಳ ಇವರಿಗೆ ಅಚ್ಚುಮೆಚ್ಚು. ಟೆಂಟ್ ಹಾಗೂ ಬಯಲಾಟ ಮೇಳಗಳ ಪ್ರದರ್ಶನದ ಬಗ್ಗೆ ಅವರ ಅನಿಸಿಕೆ – "ಟೆಂಟ್ ಮೇಳದ ಆಟಕ್ಕೆ ಬರುವವರು ಘನಸ್ಥಿಕೆಯವ್ರು. ಅಲ್ಲಿ ಕಲಾವಿದ ತಪ್ಪು ಮಾಡಿದ್ರೂ ಅಂಜಿಕೆ ಇರ್ತದೆ. ನಮ್ಮ ದಾರಿ ಬಿಟ್ಟು ಹೋಗ್ಬಾರ್ದು. ಪಾತ್ರದ ಬಗ್ಗೆ ಕೇಳ್ತಾರೆ ಎಂಬ ಭಯ ಇರ್ತದೆ. ಬಯಲಾಟದಲ್ಲಿ ಹಾಗಲ್ಲ ಎದುರು ಕೂತ ಮಕ್ಕಳೆಲ್ಲಾ ಮಾತನಾಡ್ತಾ ಇರ್ತಾರೆ. ಬಾಯಿ ಪಾಠ ಮಾಡಿದ ಹಾಗೆ ಮಾತನಾಡಿಕೊಂಡು ಬರುವುದು. ಟೆಂಟ್ ಮೇಳದಲ್ಲಿ ನಾವು ಮಾಡಿದ ಪಾತ್ರದ ಮೂಲಕ ಜನರು ಮೆಚ್ಚಿಬೇಕು." ಇದು ಅವರ ಅನುಭವ. ಮುಖ್ಯಪ್ರಾಣ ಕಿನ್ನಿಗೋಳಿಯವರಿಗೆ ಹಾಸ್ಯಕ್ಕೆ ಮಿಜಾರು ಅಣ್ಣಪ್ಪ, ವಿಟ್ಲ ಗೋಪಾಲಕೃಷ್ಣ ಜೋಶಿ, ನೆಲ್ಲಿಕಟ್ಟೆ ನಾರಾಯಣ ಹಾಸ್ಯಗಾರರು ಹಾಗೂ ಯಕ್ಷಗಾನಕ್ಕೆ ಶಿಮಂತೂರು ನಾರಾಯಣ ಶೆಟ್ಟಿಯವರು ಗುರುಗಳು. ಕಾಳಿಂಗ ನಾವುಡರು, ಕಡತೋಕ ಮಂಜುನಾಥ ಭಾಗವತರು, ಸುಬ್ರಹ್ಮಣ್ಯ ಧಾರೇಶ್ವರ, ಸ್ತ್ರೀ ವೇಷದಲ್ಲಿ ಅರಾಟೆ, ಕುಂಜಾಲು ರಾಮಕೃಷ್ಣ ಹಾಸ್ಯಗಾರ ಮೊದಲಾದವರ ಒಡನಾಟ ಮರೆಯಲಾಗದ್ದು ಎಂದು ಅವರು ಹೇಳುತ್ತಾರೆ.

## ರಂಗ ಮಾರ್ಗದರ್ಶಿ

**ಪ್ರಶ್ನೆ** – ವೇಷಧಾರಿ ಪದ್ಯಕ್ಕೆ ಅರ್ಥ ಹೇಳುವ ಔಚಿತ್ಯತೆ ಬೆಳೆಸಿಕೊಳ್ಳಬೇಕಾದದ್ದು ಹೇಗೆ? ವರ್ತಮಾನ ಹೇಗಿದೆ? ಯಕ್ಷಗಾನೀಯ ಅರ್ಥಗಾರಿಕೆಯ ವ್ಯಾಪ್ತಿ ಯ ಕುರಿತು ನಿಮ್ಮ ಅನಿಸಿಕೆ...

**ಉತ್ತರ**– ಯಕ್ಷಗಾನ ಕಲಾವಿದರಿಗೆ ಪ್ರಸಂಗದ ಪದ್ಯಗಳು ಪ್ರಮಾಣವೇ ವಿನಹ ಮೂಲಗ್ರಂಥವಲ್ಲ. ಸನ್ನಿವೇಷಕ್ಕೆ ಅಪಚಾರವಾಗದಂತೆ ಮೂಲಗ್ರಂಥದ ವಿಷಯ ಪ್ರಸಂಗತ್ವೇನ ಮಾತಿನಲ್ಲಿ ಬಳಸಿಕೊಂಡರೆ ತಪ್ಪಲ್ಲ. ಇದನ್ನು ಪ್ರಾಜ್ಞರು ಸಮ್ಮತಿಸುತ್ತಾರೆ. ಮೊಂಡುವಾದ ಸಲ್ಲದು. ಯಕ್ಷಗಾನದಲ್ಲಿ ಎದುರಿನವರಿಂದ ಮಾತು ಹೊರಡಿಸುವುದೇ ಅರ್ಥ. ಬಾಯಿ ಕಟ್ಟಿಸುವುದು ಅರ್ಥಗಾರಿಕೆಯೇ ಅಲ್ಲ. ಇನ್ನು ಯಾವ ಪಾತ್ರದಾರಿಯೇ ಆದರೂ ಭಾಗವತರು ಹೇಳಿದ ಪದ್ಯವನ್ನು ಉದ್ಧರಿಸಬೇಕು. ಹಾಗಿದ್ದರೆ ಅವರು ಏನು ಹಾಡು ಆರಂಭಿಸಿರುತ್ತಾರೆ, ಅಲ್ಲಿಂದಲೇ ಅರ್ಥವೂ ಪ್ರಾರಂಭಿಸಬೇಕು. ಉದಾಹರಣೆಗೆ: ಶ್ರೀ ದೇವಿ ಮಹಾತ್ಮೆ – ಮಾಲಿನಿಯ ಪದ್ಯ – ಜನನಿಯಾಜ್ಞೆಯಲಿ ಮಾನಿನಿಯು ಈ ಪದ್ಯಕ್ಕೆ ಅರ್ಥ "ಅಮ್ಮ ದಿತಿ ದೇವಿಯ ಆಜ್ಞೆಯಲ್ಲವೇ ನನಗೆ? ಮಗಳೇ ಮಾಲಿನಿ, ನಮ್ಮ ವಂಶದ ಏಳಿಗೆ ನಿನ್ನಿಂದ ಆಗಬೇಕು ನೀನು ತಪಸ್ಸಿಗೆ ಹೋಗಿ ಘನವರ ಪಡೆದು ಬಾ ಹೀಗೆ ಹೇಳಿದರು. ಕಾರಣ ಕೇಳಿದಾಗ ಕಶ್ಯಪ ಬ್ರಹ್ಮರ ಹಿರಿಯ ಪತ್ನಿ ನಾನು. ದೈತ್ಯ ವಂಶ ನಮ್ಮದು ಇತ್ಯಾದಿ ಇತ್ಯಾದಿ... ಏನು ಬೇಕಾದರೂ ವಿಸ್ತರಿಸಿ ಹೇಳಬಹುದು ತಪ್ಪಲ್ಲ. ಪದ್ಯ ನಿಂತ ತಕ್ಷಣ ಕಶ್ಯಪ ಬ್ರಹ್ಮರ ಹೆಂಡಿರಲ್ಲಿ ನನ್ನಮ್ಮ ಹಿರಿಯಳು. ಹೀಗೆ ಪ್ರಾರಂಭಿಸಿದರೆ ಭಾಗವತರ ಪದ್ಯಕ್ಕೆ ಬೆಲೆ ಕೊಟ್ಟಂತಾಗುವುದಿಲ್ಲ. ಶ್ರೀ ರಾಮನ ಒಂದು ಪದ್ಯ – "ನೋಡಿ ನಿರ್ಮಲ ಜಲ ಸಮೀಪದಿ... ಇಲ್ಲಿ ದಶರಥ ಭೂಪತಿಗಳ ಮೂರು ಹೆಂಡಿರಲ್ಲಿ ನಾಲ್ಕು ಮಕ್ಕಳು ಅಂತ ಪ್ರಾರಂಭಿಸಿದರೆ ಸರಿಯಲ್ಲ. ಹಾಗಿದ್ದರೆ ಹೇಗೆ? "ನೋಡಿದೆಯಾ ತಮ್ಮ ನಿರ್ಮಲವಾದ ಜಲ ಹರಿಯುತ್ತಿದೆ. ಇದೆ ಗೋದಾವರಿ ಆದರೆ ನಾವು ಇಲ್ಲಿರಬೇಕಾದವರೇ?" ಇಷ್ಟನ್ನು ಹೇಳಿ ಹಿಂದಿನ ವಿಚಾರ ಹೇಳಿದರೆ ಆ ಪದ್ಯಕ್ಕೆ ಗೌರವ ಕೊಟ್ಟಂತೆ. ವರ್ತಮಾನದಲ್ಲಿ ಈ ಬಗ್ಗೆ ತಿಳುವಳಿಕೆ ಬೆರಳೆಣಿಕೆಯವರಲ್ಲಿ ಮಾತ್ರವೇ ಇದೆ, ಉಳಿದವರು ಚಿಂತನೆ ನಡೆಸುತ್ತಿಲ್ಲ. ಇದು ವಿಷಾದ. ಪದ್ಯ + ಅರ್ಥ ಎಂದರೆ ಭಾಗವತರು ಹೇಳಿದ ಪದ್ಯದ ಸರಳಾನುವಾದ ಮಾತ್ರವಲ್ಲದೆ ವಿಶ್ಲೇಷಣೆ ಮಾಡುವುದೇನಿದೆ? ಅದರ ಹೊರತು ಆವರಣದಿಂದ ಹೊರಬಂದರೆ ಖಂಡಿತ ತಪ್ಪು. ಉದಾ: ಸುಧನ್ವ ಕಾಳಗದಲ್ಲಿ ಅರ್ಜುನ, "ನಿಮ್ಮ ಅಜ್ಜ ಯಾರು ಮುತ್ತಜ್ಜ ಯಾರು ಅಥವ ನಿನ್ನ ಕೇತನ ಯಾವುದು?" ಹೀಗೆಲ್ಲ ಪ್ರಶ್ನೆ ಕೇಳಿದರೆ ಉತ್ತರಿಸದಿದ್ದವನ ತಪ್ಪಲ್ಲ. ಔಚಿತ್ಯ ಮೀರಿ ಪ್ರಶ್ನೆ ಕೇಳಿದವನದೇ ತಪ್ಪು. ***– ಎಂ ಕೆ ರಮೇಶ್, ಹಿರಿಯ ಕಲಾವಿದರು***

***(ಈ ವಿಭಾಗದಲ್ಲಿ ರಂಗ ನಡೆ, ಪ್ರಸಂಗ, ವೇಷ ಕ್ರಮ ಮೊದಲಾದ ವಿಚಾರಗಳಿಗೆ ಸಂಬಂಧಿಸಿ ಪ್ರಶ್ನೆಗಳನ್ನು ನೀವು ಕಳುಹಿಸಬಹುದು. ಅನುಭವಿ ಕಲಾವಿದರಾದ ಎಂ ಕೆ ರಮೇಶ್ ಆಚಾರ್ ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ. ನಿಮ್ಮ ಪ್ರಶ್ನೆಗಳನ್ನು ವಾಟ್ಸಾಪ್ ಮಾಡಿ –*** 9449686807– ***ಸಂಪಾದಕರು)***

## ಕಾಫಿ ನಾಡಲ್ಲೊಂದು ಯಕ್ಷ ಸಂಸ್ಥೆ – ಶ್ರೀ ಕುಮಾರ ಸಾಂಸ್ಕೃತಿಕ ಪ್ರತಿಷ್ಠಾನ

ಕಡಲತೀರದ ಪರಿಪೂರ್ಣ ಕಲೆಎಂದೇ ಜನಜನಿತವಾದ ಯಕ್ಷಗಾನವು ಅಲ್ಲಿನ ಎಲ್ಲರ ಉಸಿರಲ್ಲೂ ಬೆರೆತಿರುತ್ತದೆ. ಚೆಂಡೆಯ ಸದ್ದು ಎಲ್ಲರ ಕಿವಿ ನಿಮಿರಿಸುತ್ತದೆ. ಕಾಲಲ್ಲಿ ಹೆಜ್ಜೆ ಹಾಕಿಸುತ್ತದೆ. ಮಲೆನಾಡಿಗೆ ಅದು ಹೊಸತು. ಆದರೆ ಕಾಫಿ ನಾಡಾದ ಚಿಕ್ಕಮಗಳೂರು ಜಿಲ್ಲೆಯ ಪುಟ್ಟ ಊರು ಪಚ್ಚೆ ಹಳ್ಳಿ ಹಳುವಳ್ಳಿಯಲ್ಲಿ ಚೆಂಡೆ ಮದ್ದಳೆಯ ಸದ್ದು ಮೊಳಗುತ್ತದೆ. ಕಾಂತೀಯ ಶಕ್ತಿಯನ್ನು ಹೊಂದಿರುವ ಕಲೆಯನ್ನು ಮಲೆನಾಡಿನ ಹೊಸಿಲಿಗೆ ತಂದ ಕೀರ್ತಿ ಹಳುವಳ್ಳಿಯ ಸೊಸೆ ಕಡಲೂರಿನ ಮಗಳು ಶ್ರೀಮತಿ ಜ್ಯೋತಿ ಟಿ ಎನ್ ರವರಿಗೆ ಸಲ್ಲುತ್ತದೆ. ಅಲ್ಲಿಂದ ಪ್ರಾರಂಭವಾಯಿತು ನೋಡಿ, ಹತ್ತು ಹಲವು ಯಕ್ಷಗಾನ ಚಟುವಟಿಕೆಗಳು. "ಶ್ರೀ ಕುಮಾರ ಸಾಂಸ್ಕೃತಿಕ ಪ್ರತಿಷ್ಠಾನ"




ಎಂಬ ಸಂಸ್ಥೆಯನ್ನು ಆಕೆ ಸ್ಥಾಪಿಸಿಯೇ ಬಿಟ್ಟರು. ಪಣ ತೊಟ್ಟು ಆಸಕ್ತ ಮಕ್ಕಳಿಗೆ ಯಕ್ಷಗಾನದ ತಾಲೀಮು ಸುರು ಮಾಡಿಕೊಂಡರು ಜೊತೆಜೊತೆಗೆ ಪ್ರದರ್ಶನಕ್ಕೆ ಬೇಕಾದ ವೇಷ–ಭೂಷಣ, ಬಣ್ಣ, ಹಿಮ್ಮೇಳದವರನ್ನು ಕರೆಸಿ ಹಳುವಳ್ಳಿಯಲ್ಲೊಂದು ಯಕ್ಷಗಾನ ಪ್ರದರ್ಶನ ಕೊಟ್ಟೆ ಬಿಟ್ಟರು ಈ ಸಾಹಸಿ ಹೆಣ್ಣು ಮಗಳು. ಇದು ಮಲೆನಾಡಿನಲ್ಲಿ "ಶ್ರೀ ಕುಮಾರ ಸಾಂಸ್ಕೃತಿಕ ಪ್ರತಿಷ್ಠಾನ" ಹುಟ್ಟಿಕೊಂಡ ಕಥೆ. ಈ ಸಂಸ್ಥೆಗೆ ತರಬೇತುದಾರರಾಗಿ ಮಂಗಳೂರಿನಿಂದ ಬರುತ್ತಿದ್ದ, ದಿನಕರ್ ಪಚ್ಚನಾಡಿ, ಶರತ್ ಕುಮಾರ್ ಕದ್ರಿ ಮೊದಲಾದವರು ಸಾಕಷ್ಟು ಕೊಡುಗೆ ನೀಡಿದ್ದಾರೆ. ಭಾಗವತರಾದ ಜಿ ಕೆ ನಾವುಡ, ಗುರುಗಳಾದ ರಮೇಶ್ ಶೆಟ್ಟಿ ಸಂಸ್ಥೆಗೆ ಅನುಭವಗಳ ಕೊಡುಗೆ ನೀಡಿದ್ದಾರೆ. ಸುಧನ್ವ ಮೋಕ್ಷ, ಸುದರ್ಶನ ಗರ್ವಭಂಗ, ಬಬ್ರುವಾಹನ, ಮಹಿಷವಧೆ, ಶಶಿಪ್ರಭಾ ಪರಿಣಯ, ದಕ್ಷ ಯಜ್ಞ, ಇಂದ್ರಜಿತು ಕಾಳಗ, ಕೃಷ್ಣಲೀಲೆ – ಕಂಸವಧೆ, ಶುಂಭವಧೆ, ಗಣೇಶ ಕೌತುಕ, ಮುರಾಸುರ ವಧೆ, ಜಾಂಬವತಿ ಕಲ್ಯಾಣ, ಗಿರಿಜಾ ಕಲ್ಯಾಣ, ಸುಧನ್ವ ಮೋಕ್ಷ, ಮಹಿಷಮರ್ದಿನಿ, ವೀರಮಣಿ ಕಾಳಗ, ಪೂತನಿಸಂಹಾರ, ಶ್ವೇತಕುಮಾರ ಚರಿತ್ರೆ ಹೀಗೆ ಹಲವಾರು ಪ್ರಸಂಗಗಳ ಪ್ರದರ್ಶನ ನೀಡಿದ ಹಿರಿಮೆ ಈ ಸಂಸ್ಥೆಯದು. ಕನ್ನಡ ಸಂಸ್ಕೃತಿ ಇಲಾಖೆ ನಡೆಸುವ 20 ನಿಮಿಷಗಳ ಯಕ್ಷಗಾನದಿಂದ ಹಿಡಿದು, ಆಹೋರಾತ್ರಿಯೂ ಕೂಡ ತಂಡ ಯಕ್ಷಗಾನ ಪ್ರದರ್ಶನ ನೀಡಿ ಜನಮೆಚ್ಚುಗೆ ಗಳಿಸಿದೆ. ದುರ್ಗಾ ಮಕ್ಕಳ ಮೇಳ ಕಟೀಲು ನಡೆಸಿಕೊಡುವ ಕಾರ್ಯಕ್ರಮದಲ್ಲಿ ಸತತ 7 ನೇ ವರ್ಷದ ಪ್ರದರ್ಶನ ನೀಡಿ, ಜನಮಾನಸದಲ್ಲಿ ತನ್ನ ಹೆಸರನ್ನು ಅಚ್ಚಳಿಯದಂತೆ ಮೂಡಿಸಿರುವ ತಂಡ , 2019 ರಲ್ಲಿ ದೆಹಲಿಯ ಕನ್ನಡ ಸಂಘದಲ್ಲಿ ಮಹಿಷ ವಧೆ ಪ್ರಸಂಗ ಪ್ರದರ್ಶಿಸಿ ರಾಜಧಾನಿಯಲ್ಲಿ ಕೂಡ ಜನ ಮನ್ನಣೆ ಪಡೆದಿದೆ. ರಾಷ್ಟ್ರ – ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನಗಳನ್ನು ನೀಡುತ್ತಾ ಬಂದಿದೆ. ಸಂಸ್ಥೆಯನ್ನು ಹುಟ್ಟು ಹಾಕಿದ ಶ್ರೀಮತಿ ಜ್ಯೋತಿಯವರ ಕಲಾಸೇವೆಯನ್ನು ಪರಿಗಣಿಸಿ ಕಳಸ ರೋಟರಿ ಹಾಗೂ ಜೇ ಸಿ ಐ ರವರು ಸನ್ಮಾನಿಸಿದ್ದಾರೆ. ಬೆಳದಿಂಗಳ ಸಾಹಿತ್ಯ ಸಮ್ಮೇಳನ ಕಾರ್ಕಳದಲ್ಲಿ, ಬೆಳುವಾಯಿಯಲ್ಲಿ ಶ್ರೇಷ್ಠ ಯಕ್ಷಗುರು, ಪಟ್ಲ ಫೌಂಡೇಶನ್ ಕೊಡಮಾಡುವ ಯಕ್ಷನಿಧಿ , ಆಂಜನೇಯ ಚಿಕ್ಕಮೇಳ ಪುತ್ತೂರುನಿಂದ ಸಮ್ಮಾನ , ತಾರಾನಾಥ ವರ್ಕಾಡಿಯವರಿಂದ ಬೆಳ್ಮಣ್ ನಲ್ಲಿ ಸಮ್ಮಾನ ,ಮಹಿಳಾ ಸಾಹಿತ್ಯ ಸಮ್ಮೇಳನ ಚಿಕ್ಕಮಗಳೂರು "ವನಿತಾ ಶ್ರೀ "" , ಮನ್ವಂತರ ಬಳಗ ಕಳಸ ಇವರಿಂದ "ಮಲೆನಾಡ ಯಕ್ಷ ಸಿರಿ" ಮೊದಲಾದ ಬಿರುದುಗಳಿಗೆ ಪಾತ್ರರಾಗಿದ್ದಾರೆ. ಸಂಸ್ಥೆಯ ಕಾರ್ಯದರ್ಶಿ ನಾಗಭೂಷಣ್ ಹೊಳ್ಳ ಸಂಸ್ಥೆಯ ಬೆಳವಣಿಗೆಗೆ ಅವಿರತವಾಗಿ ಶ್ರಮಿಸುತ್ತಿದ್ದಾರೆ. ಶ್ರೀಮತಿ ಸರಳ ಭಟ್, ಶ್ರೀಮತಿ ಶುಭಮತಿ, ಶ್ರೀಮತಿ ಸವಿತಾ ಸಂಸ್ಥೆಯ ಕಾರ್ಯಕ್ರಮಗಳಿಗೆ ಸಹಕರಿಸುತ್ತಿದ್ದಾರೆ.

**ಲೇಖಕರು: ಶ್ರೀಮತಿ ಚೈತ್ರ ಎಸ್ಪಿ**


**ಅಭಿನಂದನೆಗಳು**



## ಅಭಿನಂದನೆಗಳು

ನಮ್ಮ ಪತ್ರಿಕಾ ಬಳಗದ ಅಂಕಣಕಾರರಾದ ಶ್ರೀ. ಶಾಂತಾರಾಮ ಕುಡ್ವರಿಗೆ ಮಂಗಳೂರಿನ ವಾಗೀಶ್ವರೀ ಯಕ್ಷಗಾನ ಕಲಾವರ್ಧಕ ಸಂಘದ ವತಿಯಿಂದ ಶತಮಾನೋತ್ಸವ ಪ್ರಶಸ್ತಿ ನೀಡಲಾಗಿದೆ. ಸನ್ಮಾನಿತರಾಗಿ ಪ್ರಶಸ್ತಿ ಸ್ವೀಕರಿಸಿವ ಶಾಂತಾರಾಮರಿಗೆ ಪತ್ರಿಕಾ ತಂಡದಿಂದ ಹಾರ್ದಿಕ ಶುಭಾಶಯಗಳು. ಕರ್ನಾಟಕ ಯಕ್ಷಗಾನ ಅಕಾಡೆಮಿಯ ಸಹಭಾಗಿತ್ವದಲ್ಲಿ ಮಹಾಮಾಯ ದೇವಸ್ಥಾನದಲ್ಲಿ ನಡೆಯುತ್ತಿರವ ಕಾರ್ಯಕ್ರಮದಲ್ಲಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು ಅಭಿನಂದನೆಗಳು

## ಚಾರಿಟಿ ರೂಮ್



ತೆಂಕು ತಿಟ್ಟಿನ ಖ್ಯಾತ ಭಾಗವತರಾಗಿದ್ದ ***ಬಲಿಪ ಪ್ರಸಾದ್ ಭಾಗವತ***ರು ಅಕಾಲಿಕ ಮರಣಕ್ಕೊಳಗಾಗಿದ್ದು ಇದರಿಂದ ಅವರ ಕುಟುಂಬ ಕಂಗಾಲಾಗಿದೆ. ಇವರ ನಿಧನದಿಂದ ಇವರ ಮಕ್ಕಳ ವಿದ್ಯಾಭ್ಯಾಸ ಹಾಗೂ ಆರ್ಥಿಕ ಸಮಸ್ಯೆಗಳು ಎದುರಾಗಿದ್ದು, ಇವರ ಕುಟುಂಬಕ್ಕೆ ಆರ್ಥಿಕ ನೆರವಿನ ಅಗತ್ಯವಿದೆ. ಅಗಲಿದ ಕಲಾವಿದನ ಕುಟುಂಬಕ್ಕೆ ಸಹಾಯ ಮಾಡಬಯಸುವ ದಾನಿಗಳು ಬಲಿಪರ ಪತ್ನಿ ಶ್ರೀಮತಿ ದುರ್ಗಾದೇವಿಯವರ ಖಾತೆಗೆ ಹಣ ಜಮಾವಣೆ ಮಾಡಬಹುದು. ಬ್ಯಾಂಕ್ ವಿವರ – Smt. Durgadevi, Canara Bank, Bulmatta, Mangalore, Ac Num- 110045840401, IFSC Code – CNRB0001333



ಛಂದೋಬ್ರಹ್ಮ ಬಿರುದಾಂಕಿತ ***ಯಕ್ಷಕವಿ ಶ್ರೀಯುತ ಗಣೇಶ್ ಕೊಲೆಕಾಡಿ***ಯವರು ಅಪ್ಪಟ ದುರಂತ ಕಥೆ. ಮೇರು ಹಿಮಾಲಯದಷ್ಟು ಜ್ಞಾನ, ಕವಿತ್ವ ಯಕ್ಷಗಾನದಲ್ಲಿ ಗುರುತ್ವ ಹಾಗೂ ಅಪಾರ ಶಿಷ್ಯವರ್ಗ ಇವರ ಜೀವಮಾನದ ಸಂಪಾದನೆ. ದೀರ್ಘ ಕಾಲದ ಗಂಭೀರ ಅನಾರೋಗ್ಯ ಪರಿಸ್ಥಿತಿಯಿಂದಾಗಿ ಜೀವನ ನಿರ್ವಹಣೆ ತುಂಬ ಕಷ್ಟವಾಗಿದೆ. ಇವರು ಕಳೆದ ವಾರವಷ್ಟೇ ಮತ್ತೆ ಬಾಯಿಯ ಆಪರೇಷನ್ ಗೆ ಒಳಗಾಗಿದ್ದು ಮತ್ತೆ ಆಸ್ಪತ್ರೆಯ ದೊಡ್ಡ ಮೊತ್ತ ಇವರಿಗೆ ಹೊರಲಾಗದ ಹೊರೆಯಾಗಿದೆ. ವೈದ್ಯಕೀಯ ಖರ್ಚು ವೆಚ್ಚಗಳಿಂದ ಕಂಗಾಲಾಗಿರುವ ಯಕ್ಷಗುರುವಿಗೆ ಶಿಷ್ಯವರ್ಗ ಹಾಗೂ ಯಕ್ಷಾಭಿಮಾನಿಗಳ ಸಹಾಯ ಹಸ್ತ ಬೇಕಿದೆ. ಸಹೃದಯರು ಇವರ ಕಷ್ಟಕ್ಕೆ ಸ್ಪಂದಿಸಿ ಇವರು ಚೇತರಿಸಿಕೊಳ್ಳಲು ಸಹಾಯ ಮಾಡುವ ಸಂಕಲ್ಪ ಮಾಡಬೇಕಿದೆ. ಗಣೇಶ್ ಕೊಲೆಕಾಡಿಯವರಿಗೆ ನೆರವು ನೀಡಲು ಬಯಸುವವರು ಈ ಕೆಳಗಿನ ಬ್ಯಾಂಕ್ ಖಾತೆಗೆ ನಿಮ್ಮ ಸಹಾಯಧನವನ್ನು ಕಳುಹಿಸಿಕೊಡಬಹುದು. State bank of India, Karnad Mulki branch, A/c No: 20303905203, IFSC: SBINooo7904. Google pay - 9482130381

## ಫೋಟೋ ಸ್ಟೋರಿ







19–03–2022ರಂದು ಶಿರಸಿಯ ಹರಿಶಿ ಶ್ರೀ ಲಕ್ಷ್ಮಿ ವೆಂಕಟರಮಣ ದೇವಸ್ಥಾನದಲ್ಲಿ ನಡೆದ ಚಂದ್ರಾವಳಿ ವಿಲಾಸದ ಕೆಲ ದೃಶ್ಯಗಳು.







ದಿನಾಂಕ 11–04–2022 ರಂದು ಶಂಕರಪ್ಪನ ಕೊಡ್ಲು ಜಾತ್ರೆಯ ಪ್ರಯುಕ್ತ ಶ್ರೀ ಲಕ್ಷ್ಮಿ ವೆಂಕಟರಮಣ ದೇವಳದ ಪ್ರಾಂಗಣದಲ್ಲಿ ನಡೆದ ಚಂದಮಾಮ ಶಿಶು ಯಕ್ಷಗಾನ ಪ್ರಸಂಗದ ದೃಶ್ಯಗಳು